# ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987.

ಪ್ರಕರಣಗಳ ಕ್ರಮಪಟ್ಟಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

### ಅಧ್ಯಾಯ I

ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.


### ಅಧ್ಯಾಯ II

ನಗರಾಭಿವೃದ್ಧಿ ಪ್ರಾಧಿಕಾರ


3. ಪ್ರಾಧಿಕಾರದ ರಚನೆ ಮತ್ತು ನಿಗಮನ.
4. ಸದಸ್ಯರುಗಳ ಪದಕ್ಕೆ ಅನರ್ಹತೆ.
5. ಸದಸ್ಯರ ಪದಾವಧಿ ಮತ್ತು ಸೇವಾಷರತ್ತುಗಳು.
6. ಸದಸ್ಯನನ್ನು ತೆಗೆದುಹಾಕುವುದು.
7. ಮರು ನೇಮಕಾತಿಗೆ ಅರ್ಹತೆ.
8. ಪ್ರಾಧಿಕಾರದ ಸಭೆಗಳು.
9. ಸಮಿತಿಗಳ ನೇಮಕಾತಿ.
10. ಭಿನ್ನ ಭಿನ್ನ ಪ್ರಾಧಿಕಾರಿಗಳ ಅಧಿಕಾರಗಳು.
11. ಪ್ರಾಧಿಕಾರವು ತನ್ನ ಮೂಲಕವಾದ ಅಥವಾ ತನ್ನ ವಿರುದ್ಧದ ಕ್ಲೇಮುಗಳನ್ನು ರಾಜಿ ಮಾಡಿಕೊಳ್ಳಬಹುದು.
12. ಕಮಿಷನರ ನೇಮಕಾತಿ.
13. ಕಮಿಷನರ ಅಧಿಕಾರಗಳು ಮತ್ತು ಕರ್ತವ್ಯಗಳು.
14. ಪ್ರಾಧಿಕಾರದ ಉದ್ದೇಶಗಳು.


### ಅಧ್ಯಾಯ III

ಅಭಿವೃದ್ಧಿ ಸ್ಕೀಮುಗಳು


15. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ ಮುಂತಾದವುಗಳಿಗಾಗಿ ವೆಚ್ಚವನ್ನು ವಹಿಸಲು ಪ್ರಾಧಿಕಾರದ ಅಧಿಕಾರ.
16. ಒಂದು ಅಭಿವೃದ್ಧಿ ಸ್ಕೀಮಿನಲ್ಲಿ ಉಪಬಂಧ ಕಲ್ಪಿಸಬೇಕಾದ ವಿವರಗಳು.
17. ಯೋಜನೆಯನ್ನು ಪೂರ್ಣಗೊಳಿಸಿದ ಮೇಲೆ ಕಾರ್ಯವಿಧಾನ.
18. ಸ್ಕೀಮಿನ ಮಂಜೂರಾತಿ.
19. ಮಂಜೂರಾತಿಯ ತರುವಾಯ ಆರ್ಜಿಸಬೇಕಾದ ಭೂಮಿಯ ವಿವರಗಳನ್ನು ನೀಡಿ ಪ್ರಕಟಿಸಬೇಕಾದ ಘೋಷಣೆ.
20. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು.
21. ಪ್ರಾಧಿಕಾರದಿಂದ ಪುರೋಭಿವೃದ್ಧಿ ತೆರಿಗೆಯ ನಿರ್ಧರಣೆ.
22. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ.
23. ಪುರೋಭಿವೃದ್ಧಿ ತೆರಿಗೆಯ ವಸೂಲಿ.
24. ಮುಂದಿನ ಆರ್ಜನೆಗೆ ಸಂದಾಯ ಮುಂತಾದವುಗಳು ಪ್ರತಿಷೇಧವಾಗಿರುವುದಿಲ್ಲ.
25. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರದ ಅಧಿಕಾರ.
26. ಮಸೂಲಾದ ಪುರೋಭಿವೃದ್ಧಿ ತೆರಿಗೆಯನ್ನು ಸ್ಥಳೀಯ ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು.
27. ಪ್ರಾಧಿಕಾರವು ಐದು ವರ್ಷಗಳೊಳಗಾಗಿ ಸ್ಕೀಮನ್ನು ನಿರ್ವಹಿಸಬೇಕು.

28. ಪ್ರಾಧಿಕಾರವು ಅಗತ್ಯಪಡಿಸಿದರೆ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಭೂಮಿಯು ಬೀದಿಯ ನಿರ್ಮಾಣದ ಸಲುವಾಗಿ ತಾತ್ಕಾಲಿಕವಾಗಿ ಪ್ರಾಧಿಕಾರದಲ್ಲಿ ನಿಹಿತವಾಗುವುದು.

29. ಪ್ರಾಧಿಕಾರ ಮತ್ತು ಕಮಿಷನರು, 1977ರ ಕರ್ನಾಟಕ ಅಧಿನಿಯಮ 14 ಮತ್ತು 1964ರ ಕರ್ನಾಟಕ ಅಧಿನಿಯಮ 22ರ ಅಡಿಯಲ್ಲಿ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವುದು.

30. ಬೀದಿಗಳು ಪೂರ್ಣಗೊಂಡ ಮೇಲೆ ಅವು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಬೇಕು ಮತ್ತು ಅವುಗಳಿಂದ ನಿರ್ವಹಣೆ ಆಗಬೇಕು.

31. ಕೆಲವು ಸಂದರ್ಭಗಳಲ್ಲಿ ನಿವೇಶನಗಳನ್ನು ಪ್ರಾಧಿಕಾರವು ಮಾರಾಟ ಮಾಡಬಾರದು ಅಥವಾ ಅನ್ಯಥಾ ವಿಲೆ ಮಾಡಬಾರದು.

32. ಹೊಸ ಬಡಾವಣೆಗಳು ಅಥವಾ ಲೇಔಟ್‌ಗಳ ನಿರ್ಮಾಣ ಮಾಡುವುದು ಅಥವಾ ಹೊಸ ಖಾಸಗಿ ಬೀದಿಗಳ ರಚನೆ.

33. ಬಡಾವಣೆ, ಲೇಔಟ್ ಅಥವಾ ಬೀದಿಯನ್ನು ಬದಲಾಯಿಸುವುದು ಅಥವಾ ಕೆಡಹುವುದು.

34. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ನಿರ್ವಹಿಸಲು ಪ್ರಾಧಿಕಾರದ ಅಧಿಕಾರ.

## ಅಧ್ಯಾಯ IV
### ಭೂ ಆರ್ಜನೆ

35. ಒಪ್ಪಂದದ ಮೂಲಕ ಭೂಮಿಯನ್ನು ಆರ್ಜಿಸಲು ಪ್ರಾಧಿಕಾರದ ಅಧಿಕಾರ.

36. ಒಪ್ಪಂದದ ಮೂಲಕವಲ್ಲದೆ ಅನ್ಯಥಾ ಭೂ ಆರ್ಜನೆಗೆ ಅನ್ವಯಿಸುವ ಉಪಬಂಧಗಳು.

## ಅಧ್ಯಾಯ V
### ಸ್ವತ್ತು ಮತ್ತು ಹಣಕಾಸು

37. ತನಗೆ ಅಥವಾ ಸ್ಥಳೀಯ ಪ್ರಾಧಿಕಾರಗಳು, ಮುಂತಾದವುಗಳಿಗೆ ಸೇರಿದ ಭೂಮಿಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವ ಸರ್ಕಾರದ ಅಧಿಕಾರ.

38. ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ವರ್ಗಾಯಿಸಲು ಪ್ರಾಧಿಕಾರದ ಅಧಿಕಾರ.

39. ಉದ್ಯಾನವನಗಳು, ಆಡದ ಮೈದಾನಗಳು ಮತ್ತು ನಾಗರಿಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ಪ್ರದೇಶವನ್ನು ಇತರ ಉದ್ದೇಶಗಳಿಗಾಗಿ ಉಪಯೋಗಿಸಲು ನಿಷೇಧ.

40. ಸಾಲ ಪಡೆಯಲು ಪ್ರಾಧಿಕಾರದ ಅಧಿಕಾರ.

41. ಅಭಿವೃದ್ಧಿ ನಿಧಿ ಹಾಗೂ ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬುಗಳು.

42. ನಗರಾಭಿವೃದ್ಧಿ ನಿಧಿಯ ವಿನಿಯೋಗ.

43. ಆದಾಯ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು.

44. ಪ್ರಾಧಿಕಾರವು ಅಂಥ ಅಂದಾಜನ್ನು ಅನುಮೋದಿಸುವುದು ಅಥವಾ ತಿದ್ದುಪಡಿ ಮಾಡುವುದು.

45. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸುವುದು.

46. ಪೂರಕ ಅಂದಾಜುಗಳನ್ನು ತಯಾರಿಸಿ ಅವಶ್ಯಕವಿದ್ದಾಗ ಒಪ್ಪಿಸುವುದು.

47. ವೆಚ್ಚದ ಸಂಬಂಧದ ಉಪಬಂಧಗಳು.

48. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.

49. ವರದಿಗಳು.

50. ದಸ್ತಾವೇಜುಗಳನ್ನು ಹಾಜರುಪಡಿಸಲು ಹಾಗೂ ಸಂಬಂಧಪಟ್ಟ ವ್ಯಕ್ತಿಗಳ ಹಾಜರಾತಿಯನ್ನು ಆಗತ್ಯಪಡಿಸಲು ಲೆಕ್ಕ ಪರಿಶೋಧನಾಧಿಕಾರಿಯ ಅಧಿಕಾರ.

## ಅಧ್ಯಾಯ VI
### ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು

51. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾದ ಅಧಿಕಾರಿಗಳು ಮತ್ತು ನೌಕರರ ಪಟ್ಟಿ.

52. ನೇಮಕಾತಿ ಮುಂತಾದವುಗಳನ್ನು ಯಾರು ಮಾಡಬೇಕು.

## ಅಧ್ಯಾಯ VII
### ಸಂಕೀರ್ಣ

53. ಪ್ರವೇಶಾಧಿಕಾರಗಳು.
54. ಪ್ರಾಧಿಕಾರದಿಂದ ನಿರ್ದೇಶನ.
55. ಕಂಪನಿಗಳಿಂದ ಅಪರಾಧಗಳು.
56. ಜುಲ್ಮಾನೆಯನ್ನು ವಸೂಲು ಮಾಡಿದಾಗ, ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು.
57. ಅಪರಾಧಗಳ ಬಗ್ಗೆ ರಾಜಿ.
58. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು.
59. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.
60. ಅಭಿಯೋಜನೆಯ ಮಂಜೂರಾತಿ.
61. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.
62. ಪ್ರತ್ಯಾಯೋಜಿಸಲು ಅಧಿಕಾರ.
63. ಪುನರೀಕ್ಷಣೆ.
64. ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು.
65. ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.
66. ನೌಕರರ ವರ್ಗಾವಣೆ.
67. ಗೊತ್ತುವಳಿಯ ಪ್ರತಿಗಳನ್ನು ಸಲ್ಲಿಸುವುದು ಮತ್ತು ಗೊತ್ತುವಳಿ ಅಥವಾ ಆದೇಶವನ್ನು ರದ್ದುಪಡಿಸಲು ಸರ್ಕಾರದ ಅಧಿಕಾರ.
68. ಕರ್ತವ್ಯ, ನಿರ್ವಹಣೆಯಲ್ಲಿ ತಪ್ಪುವುದು.
69. ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ ತಿದ್ದುಪಡಿ.
70. ಈ ಅಧಿನಿಯಮದ ಪ್ರಾರಂಭದ ತರುವಾಯ ಗೃಹನಿಮಾಣ ಮಂಡಲಿಯು ಯಾವುದೇ ಗೃಹ ನಿರ್ಮಾಣ ಸ್ಕೀಮನ್ನು ಕೈಗೊಳ್ಳಬಾರದು.
71. ನಿಯಮಗಳ ರಚನಾಧಿಕಾರ.
72. ವಿನಿಯಮಗಳ ರಚಾನಾಧಿಕಾರ.
73. ಉಪ-ಕಾನೂನುಗಳ ರಚನಾಧಿಕಾರ.
74. ಭೂಮಿಯ ಅನಧಿಕೃತ ಅಧಿಭೋಗದ ನಿಷೇಧ.
75. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ.
76. ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರಬೇಕು.
77. ಪ್ರಾಧಿಕಾರದ ವಿಘಟನೆ.
78. ನಗರಾಭಿವೃದ್ಧಿ ಪ್ರಾಧಿಕಾರದ ರಚನೆಯಿಂದಾಗುವ ಪರಿಣಾಮಗಳು.
79. ಈ ಅಧಿನಿಯಮವನ್ನು ಜಾರಿಗೆ ತರುವ ಆದೇಶಗಳು.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1987ರ ಅಧಿನಿಯಮ 34.**- ರಾಜ್ಯದಲ್ಲಿರುವ ನಗರ ಪ್ರದೇಶಗಳಲ್ಲಿನ ಭೂಮಿಯ ಯೋಜನೆ ಮತ್ತು ಅಭಿವೃದ್ಧಿಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ, ಪ್ರತಿಯೊಂದು ನಗರ ಪ್ರದೇಶಕ್ಕೆ, ಯೋಜನಾ ಪ್ರಾಧಿಕಾರ ಮತ್ತು

ಅಭಿವೃದ್ಧಿ ಪ್ರಾಧಿಕಾರಗಳೆರಡೂ ಆಗಿ ಪ್ರಕಾರ್ಯಗಳನ್ನು ನಿರ್ವಹಿಸುವ ಒಂದು ಏಜೆನ್ಸಿ ಇರುವುದು ಅಪೇಕ್ಷಣಿಯವೆಂದು ಕಂಡು ಬಂದಿದೆ.

ಆದ್ದರಿಂದ ಈ ವಿಧೇಯಕ.

(1987ರ ವಿಧಾನಸಭಾ ವಿಧೇಯಕ ಸಂಖ್ಯೆ 13 ರಲ್ಲಿದ್ದಂತೆ).

## II

**1991ರ ಅಧಿನಿಯಮ 17.- ಟಿಪ್ಪಣಿ:** ಈ ಅಧಿನಿಯಮದ ಮೂಲಕ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ ಅಧಿನಿಯಮ, 1961ಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮಾಡುವಾಗ 1987ರ ಅಧಿನಿಯಮ 34ಕ್ಕೆ ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.

## III

**1992ರ ಅಧಿನಿಯಮ 14.-** ಸಂಬಂಧಪಟ್ಟ ನಗರ ಪ್ರದೇಶದ ಖಾಯಂ ನಿವಾಸಿಗಳಾದ ವಿಧಾನ ಪರಿಷತ್ತಿನ ಸದಸ್ಯರನ್ನು ಮತ್ತು ಪೋಲಿಸ್ ಕಮೀಷನರನ್ನು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ಸೇರಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1992ರ ಮಾರ್ಚ್ 30ನೇ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯ ಭಾಗ 4-2ಎ ರಲ್ಲಿ ನಂ.198 ಆಗಿ ಪ್ರಕಟಗೊಂಡಿದೆ.)

## IV

**1996ರ ಅಧಿನಿಯಮ 12.- ಟಿಪ್ಪಣಿ:** 1996ರ ಅಧಿನಿಯಮ 12ರ ಮೂಲಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ರಚನೆಯಾಯಿತು. ಸದರಿ ಅಧಿನಿಯಮದಲ್ಲಿ ಈ ಅಧಿನಿಯಮಕ್ಕೆ ಅಂದರೆ ನಗರಾಭಿವೃದ್ದಿ ಪ್ರಾಧಿಕಾರಗಳ ಅಧಿನಿಯಮ, 1987ಕ್ಕೆ ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲಾಯಿತು.

## V

**2017ರ ಅಧಿನಿಯಮ ಸಂಖ್ಯೆ 51.–** ಭೂ ಆರ್ಜನಾ ಅಧಿನಿಯಮ, 1894ನ್ನು ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಮೂಲಕ ನಿರಸನಗೊಳಿಸಲಾಗಿದೆ. ಆದ್ದರಿಂದ ಭೂ ಆರ್ಜನೆ, ಭೂಮಿಯ ಸ್ವಾಧೀನತೆಯನ್ನು ಆರ್ಜಿಸುವ ಮತ್ತು ಪರಿಹಾರವನ್ನು ನೀಡುವ ಉದ್ದೇಶಕ್ಕಾಗಿ ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಉಪಬಂಧಗಳನ್ನು ಸೇರಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 38:, ಕಡತ ಸಂಖ್ಯೆ:ಸಂವ್ಯಶಾಇ 07 ಶಾಸನ 2017)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 18 ಮತ್ತು 32ನೇಯ ನಮೂದನೆಯಡಿಯಲ್ಲಿ ಬರುತ್ತದೆ.)

* * * *

# 1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34

(1987ನೇ ನವೆಂಬರ್ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987

(1987ರ ನವೆಂಬರ್ 16ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

(1991ರ 17, 1992ರ 14 ,1996ರ 12 ಮತ್ತು 2017ರ 51ನೇ ಅಧಿನಿಯಮಗಳಿಂದ ತಿದ್ದುಪಡಿಯಾದಂತೆ)

**ರಾಜ್ಯದಲ್ಲಿಯ ಬೃಹತ್ ಮತ್ತು ಮುಖ್ಯ ನಗರ ಪ್ರದೇಶಗಳು ಮತ್ತು ಅವುಗಳಿಗೆ ಹೊಂದಿಕೊಂಡಿರುವ ಪ್ರದೇಶಗಳ ಯೋಜನಾಬದ್ಧ ಅಭಿವೃದ್ದಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳ ಸ್ಥಾಪನೆಯ ಸಲುವಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಸಲುವಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ರಾಜ್ಯದಲ್ಲಿಯ ಬೃಹತ್ ಮತ್ತು ಮುಖ್ಯ ನಗರ ಪ್ರದೇಶಗಳು ಮತ್ತು ಅವುಗಳಿಗೆ ಹೊಂದಿಕೊಂಡಿರುವ ಪ್ರದೇಶಗಳ ಯೋಜನಾಬದ್ಧ ಅಭಿವೃದ್ಧಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳ ಸ್ಥಾಪನೆಯ ಸಲುವಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಸಲುವಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ಮೂವತ್ತೆಂಟನೆಯ ಷವದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು ಬೆಂಗಳೂರು ಮಹಾನಗರ ಪ್ರದೇಶವನ್ನು ಹೊರತುಪಡಿಸಿ, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಷ್ಟಿಪಡಿಸಬಹುದಾದ ಅಂಥ 1[ದಿನಾಂಕದಂದು ]1 ಜಾರಿಯಲ್ಲಿ ಬರತಕ್ಕದ್ದು ಮತ್ತು ಬೇರೆ ಬೇರೆ ನಗರ ಪ್ರದೇಶಗಳಿಗೆ ಮತ್ತು ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನೀಡಬಹುದು.

1. ಈ ಅಧಿನಿಯಮವು ಬೇರೆ ಬೇರೆ ನಗರ ಪ್ರದೇಶಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ಅಧಿಸೂಚನೆ ಮೂಲಕ ಜಾರಿಗೆ ಬಂದಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(ಎ) "ಪ್ರಾಧಿಕಾರ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರ ;

(ಬಿ) "ಸೌಕರ್ಯಗಳು" ಎಂಬುದು, ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಸೌಕರ್ಯವೆಂದು ಅಧಿಸೂಚನೆಯ ಮೂಲಕ ನಿಷ್ಟಪಡಿಸಬಹುದಾದ ರಸ್ತೆ, ಬೀದಿ, ದೀಪದ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಲೋಕೋಪಯೋಗಿ ಕಾಮಗಾರಿಗಳು ಮತ್ತು ಅಂಥ ಇತರ ಅನುಕೂಲಗಳನ್ನು ಒಳಗೊಳ್ಳುತ್ತದೆ ;

(ಸಿ) "ಪುರೋಭಿವೃದ್ಧಿ ತೆರಿಗೆ" ಎಂದರೆ ಒಂದು ಅಭಿವೃದ್ಧಿ ಸ್ಕೀಮನ್ನು ಕಾರ್ಯಗತಗೊಳಿಸಿದುದರಿಂದ ಭೂಮಿಯ ಮೌಲ್ಯದಲ್ಲಿ ಉಂಟಾದ ಹೆಚ್ಚಳದ ಸಂಬಂಧದಲ್ಲಿ 20 ಮತ್ತು 21ನೇ ಪ್ರಕರಣಗಳ ಅಡಿಯಲ್ಲಿ ಸಂದೇಯವಿರುವ ತೆರಿಗೆ ;

(ಡಿ) "ಕಟ್ಟಡ" ಎಂಬುದು ಅದು ವಾಸ್ತವಿಕ ಬಳಕೆಯಲ್ಲಿರಲಿ ಅಥವಾ ಇಲ್ಲದಿರಲಿ ವಾಸ, ಉದ್ಯಮ, ವಾಣಿಜ್ಯ ಅಥವಾ ಇತರ ಉದ್ದೇಶಗಳಿಗಾಗಿ ಉಪಯೋಗಿಸಲು ಉದ್ದೇಶಿಸಿರುವ ಯಾವುದೇ ನಿರ್ಮಾಣ ಅಥವಾ ರಚನೆ ಅಥವಾ ಒಂದು ನಿರ್ಮಾಣದ ಅಥವಾ ರಚನೆಯ ಭಾಗವನ್ನು ಒಳಗೊಳ್ಳುತ್ತದೆ ;

(ಇ) "ಕಟ್ಟಡ ಕಾರ್ಯಾಚರಣೆಗಳು" ಎಂಬುದು ಪುನರ್ ನಿರ್ಮಾಣ ಕಾರ್ಯಾಚರಣೆಗಳು, ಕಟ್ಟಡಗಳ ನಿರ್ಮಿತಿಯಲ್ಲಿನ ಬದಲಾವಣೆಗಳು ಅಥವಾ ಅವುಗಳಿಗೆ ಸೇರ್ಪಡೆಗಳು ಮತ್ತು ಕಟ್ಟಡಗಳ ನಿರ್ಮಾಣದ ಸಂಬಂಧದಲ್ಲಿ ಸಾಮಾನ್ಯವಾಗಿ ಕೈಗೊಳ್ಳುವ ಇತರ ಕಾರ್ಯಾಚರಣೆಗಳನ್ನು ಒಳಗೊಳ್ಳುತ್ತದೆ ;

(ಎಫ್) "ಉಪ-ಕಾನೂನುಗಳು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ರಚಿಸಿದ ಉಪ-ಕಾನೂನುಗಳು ;

(ಜಿ) "ಅಧ್ಯಕ್ಷ" ಎಂದರೆ ಪ್ರಾಧಿಕಾರದ ಅಧ್ಯಕ್ಷ ;

(ಎಚ್) "ನಾಗರಿಕ ಸೌಕರ್ಯ" ಎಂದರೆ ಒಂದು ಮಾರಕಟ್ಟೆ, ಒಂದು ಅಂಚೆ ಕಛೇರಿ, ಒಂದು ಬ್ಯಾಂಕು, ಒಂದು ಬಸ್ ಸ್ಟ್ಯಾಂಡ್ ಅಥವಾ ಒಂದು ಬಸ್ ಡಿಪೋ, ಒಂದು ನ್ಯಾಯ ಬೆಲೆ ಅಂಗಡಿ, ಒಂದು ಹಾಲಿನ ಕೇಂದ್ರ, ಒಂದು ಶಾಲೆ, ಒಂದು ಚಿಕಿತ್ಸಾಲಯ, ಒಂದು ಹೆರಿಗೆ ಆಸ್ಪತ್ರೆ, ಒಂದು ಶಿಶುಪಾಲನಾ ಕೇಂದ್ರ, ಒಂದು ಗ್ರಂಥಾಲಯ, ಒಂದು ವ್ಯಾಯಾಮ ಶಾಲೆ, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುವ ಒಂದು ಮನರಂಜನಾ ಕೇಂದ್ರ, ಒಂದು ಸಹಕಾರಿ ಸಂಘ ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 17)ರ ಅಡಿಯಲ್ಲಿ ನೋಂದಾಯಿತವಾದ ಒಂದು ಸಂಘದಿಂದ ಅಥವಾ ಸಂಪೂರ್ಣವಾಗಿ ಧರ್ಮಾರ್ಥ, ಶೈಕ್ಷಣಿಕ, ಅಥವಾ ಧಾರ್ಮಿಕ ಉದ್ದೇಶಗಳಿಗಾಗಿಯೇ ಸೃಜಿಸಲಾದ ಒಂದು ನ್ಯಾಸದಿಂದ ನಡೆಸಲಾಗುವ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಅಥವಾ ಸೇವಾ ಮನೋಭಾವದ ಸೇವೆಗಳಿಗಾಗಿ ಒಂದು ಕೇಂದ್ರ, ಒಂದು ಪೋಲೀಸ್ ಠಾಣೆ, ಒಂದು ಪ್ರದೇಶ ಕಛೇರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಅಥವಾ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಸರ್ವಿಸ್ ಸ್ಟೇಷನ್ ಮತ್ತು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸೌಕರ್ಯ ;

(ಐ) "ಕಮೀಷನರು" ಎಂದರೆ 12ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಕಮೀಷನರು ;

(ಜೆ) "ಅಭಿವೃದ್ಧಿ" ಎಂದರೆ ತನ್ನ ವ್ಯಾಕರಣ ವ್ಯತ್ಯಾಸಗಳೊಂದಿಗೆ ಕಟ್ಟಡ, ಇಂಜಿನಿಯರಿಂಗ್ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಅಥವಾ ಅದರ ಕೆಳಗೆ, ಕೈಗೊಳ್ಳಲಾಗುವ ಇತರ ಕಾರ್ಯಾಚರಣೆಗಳು ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿನ ಯಾವುದೇ ಮುಖ್ಯ ಬದಲಾವಣೆ ಮತ್ತು ಇದು ಪುನರಭಿವೃದ್ಧಿಯನ್ನು ಒಳಗೊಳ್ಳುತ್ತದೆ ;

(ಕೆ) "ಇಂಜಿನಿಯರಿಂಗ್ ಕಾರ್ಯಾಚರಣೆಗಳು" ಎಂದರೆ ರಸ್ತೆಯನ್ನು ತಲುಪುವ ಸಾಧನಗಳ ರಚನೆ ಅಥವಾ ರೂಪಣ ;

(ಎಲ್) "ಸರ್ಕಾರ" ಎಂದರೆ ರಾಜ್ಯ ಸರ್ಕಾರ ;

(ಎಂ) "ಭೂಮಿ" ಎಂಬುದರಲ್ಲಿ, ಭೂಮಿಯಿಂದ ಮತ್ತು ಭೂಮಿಗೆ ಸೇರಿಕೊಂಡಿರುವ ಅಥವಾ ಭೂಮಿಗೆ ಸೇರಿಕೊಂಡಿರುವ ಯಾವುದಕ್ಕಾದರೂ ಶಾಶ್ವತವಾಗಿ ಬಂಧಿತವಾದ ವಸ್ತುಗಳಿಂದ ಉದ್ಭವಿಸುವ ಪ್ರಯೋಜನಗಳು ಸೇರುತ್ತವೆ ;

(ಎನ್) "ಸ್ಥಳೀಯ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಅಥವಾ ಮುಂದುವರಿದ ಒಂದು ಮುನಿಸಿಪಲ್ ಕಾರ್ಪೋರೇಷನ್ ಅಥವಾ ಒಂದು ಮುನಿಸಿಪಲ್ ಕೌನ್ಸಿಲ್;

(ಒ) "ಪ್ರವೇಶ ಸಾಧನಗಳು"ಎಂಬುದು ಖಾಸಗಿಯಾಗಿಯಾಗಲಿ ಅಥವಾ ಸಾರ್ವಜನಿಕವಾಗಿಯಾಗಲಿ ವಾಹನಗಳಿಗಾಗಿ ಅಥವಾ ಪಾದಚಾರಿಗಳಿಗಾಗಿ ಇರುವ ಯಾವುದೇ ಪ್ರವೇಶ ಸಾಧನಗಳನ್ನು ಒಳಗೊಳ್ಳುತ್ತದೆ ಮತ್ತು ಇದರಲ್ಲಿ ರಸ್ತೆಯು ಒಳಗೊಳ್ಳುತ್ತದೆ ;

(ಪಿ) "ವಿನಿಯಮ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದಿಂದ ರಚಿಸಲಾದ ವಿನಿಯಮಗಳು;

(ಕ್ಯೂ) "ಬೀದಿ" ಎಂಬುದು ಜನಮಾರ್ಗವಾಗಿರುವ ಅಥವಾ ಆಗಿರದ ಯಾವುದೇ ಹೆದ್ದಾರಿ ಮತ್ತು ಯಾವುದೇ ಒಡ್ಡುದಾರಿ, ಸೇತುವೆ, ಮೇಲು ಕಾಲುವೆ, ಕಮಾನು, ರಸ್ತೆ, ಗಲ್ಲಿ, ಕಾಲುದಾರಿ, ಚೌಕ, ಅಂಗಳ, ಓಣಿ ಅಥವಾ ಹಾದುಹೋಗುವ ಮಾರ್ಗವನ್ನು ಒಳಗೊಳ್ಳುತ್ತದೆ ;

(ಆರ್) ಯಾವುದೇ ಕಟ್ಟಡದ ಸಂಬಂಧದಲ್ಲಿ "ರಚಿಸು" ಎಂಬುದು,-

I. ಯಾವುದೇ ಕಟ್ಟಡದ ಯಾವುದೇ ಮುಖ್ಯ ಬದಲಾವಣೆ ಅಥವಾ ವಿಸ್ತರಣೆ ;

II. ಮಾನವ ವಾಸಕ್ಕಾಗಿ ಮೊದಲು ನಿರ್ಮಿಸಿರದ ಯಾವುದೇ ಕಟ್ಟಡವನ್ನು ನಿರ್ಮಿತಿಯ ಮಾರ್ಪಾಡಿನ ಮೂಲಕ ಮಾನವ ವಾಸಸ್ಥಳವಾಗಿ ಪರಿವರ್ತಿಸುವುದು ;

III. ಮೊದಲು ಮಾನವ ವಾಸದ ಒಂದು ಸ್ಥಳವಾಗಿ ನಿರ್ಮಿಸಿದ ಒಂದು ಕಟ್ಟಡವನ್ನು ಅಂಥ ಒಂದು ಅಥವಾ ಹೆಚ್ಚು ಸ್ಥಳಗಳನ್ನಾಗಿ ಪರಿವರ್ತಿಸುವುದು ;

IV. ಮಾನವ ವಾಸದ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಹೆಚ್ಚಿನ ಸಂಖ್ಯೆಯ ಅಂಥ ಸ್ಥಳಗಳನ್ನಾಗಿ ಪರಿವರ್ತಿಸುವುದು ;

V. ಕಟ್ಟಡದ ಚರಂಡಿ ವ್ಯವಸ್ಥೆ ಅಥವಾ ನೈರ್ಮಲ್ಯ ವ್ಯವಸ್ಥೆಗಳಲ್ಲಿ ಬದಲಾವಣೆ ತರುವ ಅಥವಾ ಕಟ್ಟಡದ ಭದ್ರತೆಗೆ ಗಣನೀಯವಾಗಿ ಧಕ್ಕೆಯುಂಟು ಮಾಡುವ ಅದರ ಅಂಥ ಮಾರ್ಪಾಡುಗಳು;

VI. ಯಾವುದೇ ಕಟ್ಟಡಕ್ಕೆ ಯಾವುದೇ ಕೋಣೆಗಳು, ಕಟ್ಟಡಗಳು, ಮನೆಗಳು ಅಥವಾ ಇತರ ನಿರ್ಮಾಣಗಳ ಸೇರ್ಪಡೆ ; ಮತ್ತು

VII. ಗೋಡೆಯ ಮಾಲೀಕನಿಗೆ ಸೇರಿರದ ಯಾವುದೇ ಬೀದಿ ಅಥವಾ ಭೂಮಿಗೆ ಹೊಂದಿಕೊಂಡಿರುವ ಗೋಡೆಯಲ್ಲಿ ರಚನೆ ಅಥವಾ ಬೀದಿ ಅಥವಾ ಭೂಮಿಯ ಕಡೆ ತೆರೆದುಕೊಳ್ಳುವ ಬಾಗಿಲು ;

– ಇವುಗಳನ್ನು ಒಳಗೊಳ್ಳುತ್ತದೆ;

(ಎಸ್) "ನಗರ ಪ್ರದೇಶ" ಎಂದರೆ ಒಂದು ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿರುವ ಯಾವುದೇ ಸ್ಥಳೀಯ ಪ್ರದೇಶ ಮತ್ತು ಸರ್ಕಾರವು ಆಗಿಂದಾಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳಿಗೆ ಹೊಂದಿಕೊಂಡಿರುವ ಅಂಥ ಇತರ ಪ್ರದೇಶ;

(ಟಿ) ಇಲ್ಲಿ ಬಳಸಲಾದ, ಆದರೆ ಪರಿಭಾಷಿಸಿಲ್ಲದ ಎಲ್ಲ ಇತರ ಪದಗಳು ಮತ್ತು ಅಭಿವ್ಯಕ್ತಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12) ರಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

## ನಗರಾಭಿವೃದ್ಧಿ ಪ್ರಾಧಿಕಾರ

**3. ಪ್ರಾಧಿಕಾರದ ರಚನೆ ಮತ್ತು ನಿಗಮನ.**- (1) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರವಾಯ ಸಾಧ್ಯವಾದಷ್ಟು ಬೇಗನೆ, ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ನಗರ ಪ್ರದೇಶಕ್ಕೆ, "...............ನಗರಾಭಿವೃದ್ಧಿ ಪ್ರಾಧಿಕಾರ" ವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸಬಹುದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಮತ್ತು ಸದರಿ ಹೆಸರಿನಿಂದ ದಾವೆ ಹೂಡುವ ಅಥವಾ ದಾವೆಗೊಳಗಾಗುವ ಅಧಿಕಾರವಿರುವ ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ :-

(ಎ) ಅಧ್ಯಕ್ಷರು ;

(ಬಿ) ಪಟ್ಟಣ ಯೋಜನೆಯ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ದರ್ಜೆಯಲ್ಲದ, ಪಟ್ಟಣ ಯೋಜನಾ ಇಲಾಖೆಯ ಅಧಿಕಾರಿಯಾಗಿರುವ ಒಬ್ಬ ಪಟ್ಟಣ ಯೋಜನಾಧಿಕಾರಿ ;

(ಸಿ) ಎಕ್ಸಿಕ್ಯೂಟಿವ್ ಇಂಜಿನಿಯರ್ ದರ್ಜೆಗಿಂತ ಕಡಿಮೆಯ ದರ್ಜೆಯಲ್ಲದ ಕರ್ನಾಟಕ ಇಂಜಿನಿಯರಿಂಗ್ ಸರ್ವಿಸ್‌ನಲ್ಲಿ ಅಧಿಕಾರಿಯಾಗಿರುವ ಒಬ್ಬ ಇಂಜಿನಿಯರ್ ;

(ಡಿ) ನಗರ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವ, ಕರ್ನಾಟಕ ವಿಧಾನಸಭೆಯ 1[ಸದಸ್ಯರು ಮತ್ತು ಸಂಬಂಧಪಟ್ಟ ನಗರ ಪ್ರದೇಶದ ಖಾಯಂ ನಿವಾಸಿಗಳಾಗಿರುವ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು]1 ;

1. 1992ರ ಅಧಿನಿಯಮ ಸಂಖ್ಯೆ: 14ರ ಮೂಲಕ ದಿನಾಂಕ: 24.04.1992 ರಿಂದ ಪ್ರತಿಸ್ಥಾಪಿಸಲಾಗಿದೆ.

(ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಒಬ್ಬ ಪ್ರತಿನಿಧಿ ;

(ಎಫ್)ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಒಬ್ಬ ಪ್ರತಿನಿಧಿ ;

(ಜಿ) ನಿಗಮದ ಕಮೀಷನರು ಅಥವಾ ಮುನಿ ಸಿಪಲ್ ಕೌನ್ಸಿಲರ್ ಅಥವಾ ಮುನಿಸಿಪಲ್ ಕೌನ್ಸಿಲ್ಲಿನ ಮುಖ್ಯಾಧಿಕಾರಿ, ಪದನಿಮಿತ್ತ ;

(ಎಚ್) ಜಿಲ್ಲೆಯ ಡೆಪ್ಯುಟಿ ಕಮೀಷನರು, ಪದನಿಮಿತ್ತ ;

(ಐ) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಒಬ್ಬ ಚುನಾಯಿತ ಸದಸ್ಯ ;

1[(ಜೆ) ಸಂಬಂಧಪಟ್ಟ ನಗರ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ, ಸಂದರ್ಭಾನುಸಾರ, ಪೊಲೀಸ್ ಕಮೀಷನರು ಅಥವಾ ಜಿಲ್ಲೆಯ ಪದನಿಮಿತ್ತ ಪೊಲೀಸ್ ಸೂಪರಿಂಟೆಂಡೆಂಟರು.]1

1. 1992ರ ಅಧಿನಿಯಮ ಸಂಖ್ಯೆ: 14ರ ಮೂಲಕ ದಿನಾಂಕ: 24.04.1992 ರಿಂದ ಪ್ರತಿಸ್ಥಾಪಿಸಲಾಗಿದೆ.

(ಕೆ) ಜಿಲ್ಲಾ ಆರೋಗ್ಯಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಒಬ್ಬ ಅಧಿಕಾರಿ ;

(ಎಲ್) ವಾಸ್ತುಶಿಲ್ಪದಲ್ಲಿ ಅನುಭವವಿರುವ ಒಬ್ಬ ವ್ಯಕ್ತಿ ;

(ಎಮ್) ಒಬ್ಬಳು ಮಹಿಳೆ ಮತ್ತು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ಒಳಗೊಂಡ ನಾಲ್ವರು;

(ಎನ್) ಕಮಿಷನರು, ಪದನಿಮಿತ್ತ :

ಪರಂತು, ಸ್ಥಳೀಯ ಪ್ರಾಧಿಕಾರವು ರದ್ದುಗೊಂಡ ಅವಧಿಯಲ್ಲಿ, ಅಥವಾ ಯಾವೊಬ್ಬ ಆಡಳಿತಗಾರನು ನೇಮಕಗೊಂಡಲ್ಲಿ, ಆಡಳಿತಗಾರನು, ಸ್ಥಳೀಯ ಪ್ರಾಧಿಕಾರಿಗಳ ಪೈಕಿಯಿಂದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(4) (3)ನೇ ಉಪ-ಪ್ರಕರಣದ (ಎ) ಯಿಂದ (ಡಿ)ವರೆಗಿನ ಖಂಡಗಳಲ್ಲಿ ಮತ್ತು (ಕೆ) ಖಂಡದಿಂದ (ಎಮ್) ಖಂಡದವರೆಗೆ ಉಲ್ಲೇಖಿಸಲಾದ ವ್ಯಕ್ತಿಗಳನ್ನು ಸರ್ಕಾರವು ನೇಮಿಸತಕ್ಕದ್ದು ಮತ್ತು (ಇ), (ಎಫ್) ಮತ್ತು (ಐ) ಖಂಡಗಳಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳ ನಾಮನಿರ್ದೇಶನವನ್ನು ಸಂಬಂಧಪಟ್ಟ ನಿಕಾಯಗಳು ಮಾಡತಕ್ಕದ್ದು:

ಪರಂತು, ಪ್ರಾಧಿಕಾರದ ಎಲ್ಲ ಪ್ರಥಮ ಸದಸ್ಯರನ್ನು ಸರ್ಕಾರವು ನೇಮಿಸತಕ್ಕದ್ದು .

(5) ಅಧ್ಯಕ್ಷರು, ಎಂಜಿನಿಯರ್ ಮತ್ತು ಪಟ್ಟಣ ಯೋಜಕರು ಪೂರ್ಣಾವಧಿ ಸದಸ್ಯರಾಗಿರತಕ್ಕದ್ದು ಮತ್ತು ಇತರ ಸದಸ್ಯರು ಅಂಶಕಾಲಿಕ ಸದಸ್ಯರಾಗಿರತಕ್ಕದ್ದು.

(6) ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧ್ಯಕ್ಷರು ಮತ್ತು ಸದಸ್ಯರ ಹೆಸರುಗಳನ್ನು ಪ್ರಕಟಿಸತಕ್ಕದ್ದು.

**4. ಸದಸ್ಯರುಗಳ ಪದಕ್ಕೆ ಅನರ್ಹತೆ.**- (1) ಯಾವೊಬ್ಬ ವ್ಯಕ್ತಿಯು,-

(ಎ) ನೈತಿಕ ಅಧಃಪತನವನ್ನು ಒಳಗೊಳ್ಳುವುದೆಂದು ಸರ್ಕಾರವು ಅಭಿಪ್ರಾಯಪಡುವ ಒಂದು ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದು, ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದು, ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ ; ಅಥವಾ

(ಸಿ) ಅನುನ್ಮಕ್ತ ದಿವಾಳಿಯಾಗಿದ್ದರೆ ; ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ನಿಗಮದ ಸೇವೆಯಿಂದ ತೆಗೆದುಹಾಕಲಾಗಿದ್ದರೆ ಅಥವಾ ಅನರ್ಹಗೊಳಿಸಿದ್ದರೆ ; ಅಥವಾ

(ಇ) ಪ್ರಾಧಿಕಾರದ ಆದೇಶಾನುಸಾರ ಮಾಡಲಾದ ಯಾವುದೇ ಕೆಲಸದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಪ್ರಾಧಿಕಾರದ ಅಡಿಯಲ್ಲಿ ಅಥವಾ ಪ್ರಾಧಿಕಾರದ ಮೂಲಕ ಅಥವಾ ಪ್ರಾಧಿಕಾರದ ಪರವಾಗಿ ಆದ ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ತಾನೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿದ್ದರೆ ;

(ಎಫ್) ಚುನಾಯಿತ ಸದಸ್ಯನಾಗಿರುವುದರಿಂದಾಗಿ ಸ್ಥಳೀಯ ಪ್ರಾಧಿಕಾರದ ಕೌನ್ಸಿಲರ್ ಆಗಿರುವುದು ನಿಂತುಹೋದರೆ ; ಅಥವಾ

(ಜಿ) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯಾಗಿ ಉದ್ಯೋಗವನ್ನು ಅಂಗೀಕರಿಸಿದರೆ,

- ಸದಸ್ಯನಾಗಿ ನೇಮಕಗೊಳ್ಳತಕ್ಕದ್ದಲ್ಲ ಅಥವಾ ಸದಸ್ಯನಾಗಿ ಮುಂದುವರೆಯತಕ್ಕದ್ದಲ್ಲ.

(2) ಒಬ್ಬ ವ್ಯಕ್ತಿಯು ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತು ಇರುವ ಯಾವುದೇ ವೃತ್ತಪತ್ರಿಕೆಯಲ್ಲಿ ಅವನುಷೇರು ಅಥವಾ ಹಿತಾಸಕ್ತಿ ಹೊಂದಿರುವ ಕಾರಣ ಮಾತ್ರದಿಂದಲೇ (1)ನೇ ಉಪ-ಪ್ರಕರಣದ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯೊಳಗೆ ಅವನು ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವವನೆಂದು ಭಾವಿಸತಕ್ಕದ್ದಲ್ಲ.

**5. ಸದಸ್ಯರ ಪದಾವಧಿ ಮತ್ತು ಸೇವಾಷರತ್ತುಗಳು.-** ಸರ್ಕಾರದ ಇಚ್ಛಾನುಸಾರ ಮತ್ತು 6ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪ್ರಾಧಿಕಾರದ ಅಧ್ಯಕ್ಷರು ಮತ್ತು ಇತರ ಸದಸ್ಯರು, ತಾವು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಧಿಕಾರದ`ಲ್ಲಿರತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳ ಅಡಿಯಲ್ಲಿ ಪುನರ್ನೇಮಕಾತಿಗೆ ಅರ್ಹರಾಗಿರತಕ್ಕದ್ದು:

ಪರಂತು ಸ್ಥಳೀಯ ಪ್ರಾಧಿಕಾರದ ಪ್ರತಿನಿಧಿಯ ಪದಾವಧಿಯು, ಅವನು ಕೌನ್ಸಿಲರ್ ಆಗಿರುವುದು ನಿಂತುಹೋದಾಗ ಅಥವಾ ಸ್ಥಳೀಯ ಪ್ರಾಧಿಕಾರವು ರದ್ದುಗೊಂಡಾಗ ಕೊನೆಗೊಳ್ಳತಕ್ಕದ್ದು.

(2) ಸದಸ್ಯರ ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

(3) ಪದನಿಮಿತ್ತ ಸದಸ್ಯನಲ್ಲದ ಇತರ ಯಾವೊಬ್ಬ ಸದಸ್ಯನು, ತನ್ನ ಸಹಿಯೊಂದಿಗೆ, ಸರ್ಕಾರವನ್ನು ಸಂಬೋಧಿಸಿ ಬರೆದ ಪತ್ರದ ಮೂಲಕ ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಬಹುದು. ಆದರೆ ತನ್ನ ರಾಜೀನಾಮೆಯನ್ನು ಸರ್ಕಾರವು ಅಂಗೀಕರಿಸುವವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(4) ಒಬ್ಬ ಸದಸ್ಯನ ರಾಜೀನಾಮೆಯಿಂದ ಅಥವಾ ಅನ್ಯಥಾ ಉಂಟಾದ ಆಕಸ್ಮಿಕ ರಿಕ್ತತೆಯನ್ನು ಹೊಸ ನೇಮಕಾತಿ ಅಥವಾ ನಾಮನಿರ್ದೇಶನದ ಮೂಲಕ ಭರ್ತಿಮಾಡಬಹುದು ಮತ್ತು ಹಾಗೆ ನೇಮಕಗೊಂಡ ಅಥವಾ ನಾಮನಿರ್ದೇಶಿತನಾದ ವ್ಯಕ್ತಿಯು ಯಾವ ಸದಸ್ಯನ ಸ್ಥಾನಕ್ಕೆ ತಾನು ನೇಮಿತನಾಗಿರುವನೋ ಅಥವಾ ನಾಮನಿರ್ದೇಶಿತನಾಗಿರುವನೋ ಆ ಸದಸ್ಯನು ಪದಾಧಾರಣ ಮಾಡಬಹುದಾಗಿದ್ದ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಪ್ರಾಧಿಕಾರದ ರಚನೆ ಅಥವಾ ಪುನರ್‌ರಚನೆಯಲ್ಲಿಯ ಯಾವುದೇ ರಿಕ್ತತೆ ಅಥವಾ ದೋಷದ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

**6. ಸದಸ್ಯನನ್ನು ತೆಗೆದುಹಾಕುವುದು.-** ಸರ್ಕಾರವು ಒಬ್ಬ ಸದಸ್ಯನನ್ನು,-

(ಎ) ಅವನು 4ನೇ ಪ್ರಕರಣದಲ್ಲಿ ಹೇಳಿರುವ ಯಾವುವೇ ಅನರ್ಹತೆಗಳಿಗೆ ಒಳಪಡುವುದಾದರೆ, ತೆಗೆದುಹಾಕತಕ್ಕದ್ದು:

ಪರಂತು, ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಆ ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಅವನು ಒಳಪಟ್ಟಿದ್ದಾನೆ ಎಂಬ ಆಧಾರದ ಮೇಲೆ ಯಾವೊಬ್ಬ ಸದಸ್ಯನನ್ನು ತೆಗೆದುಹಾಕತಕ್ಕದ್ದಲ್ಲ ; ಅಥವಾ

(ಬಿ) ಅವನು ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯ ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರುಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೇ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ ; ಅಥವಾ

(ಡಿ) ಅವನ ಅಧಿಕಾರ ಮುಂದುವರಿಕೆಯು ಸಾರ್ವಜನಿಕ ಹಿತದೃಷ್ಟಿಗೆ ಹಾನಿಯಾಗುವಂತೆ ಅವನು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ,

– ತೆಗೆದುಹಾಕತಕ್ಕದ್ದು:

ಪರಂತು, ಅವನಿಗೆ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟು ಹೊರತು, ಈ ಖಂಡದ ಅಡಿಯಲ್ಲಿ ಯಾವೊಬ್ಬ ಸದಸ್ಯನನ್ನು ತೆಗೆದುಹಾಕತಕ್ಕದ್ದಲ್ಲ.

**7. ಮರು ನೇಮಕಾತಿಗೆ ಅರ್ಹತೆ.–** ಸದಸ್ಯನಾಗಿರುವುದು ನಿಂತು ಹೋಗುವ ಯಾವೊಬ್ಬ ವ್ಯಕ್ತಿಯು, 4ನೇ ಪ್ರಕರಣದ ಅಡಿಯಲ್ಲಿ ಅನರ್ಹನಾಗಿದ್ದ ಹೊರತು, ಸದಸ್ಯನಾಗಿ ಮರುನೇಮಕಾತಿಗೆ ಅರ್ಹನಾಗಿರತಕ್ಕದ್ದು.

**8. ಪ್ರಾಧಿಕಾರದ ಸಭೆಗಳು.–** (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷರು ಸಮಾವೇಶಗೊಳಿಸತಕ್ಕದ್ದು ಮತ್ತು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ನಡೆಸತಕ್ಕದ್ದು.

(2) ಪ್ರಾಧಿಕಾರವು ಅಂಥ ಸಮಯಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ ಕಾರ್ಯವಿಧಾನದ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು. ಒಂದು ತಿಂಗಳಲ್ಲಿ ಕಡೆಯಪಕ್ಷ ಒಂದಾದರೂ ಸಭೆ ಸೇರತಕ್ಕದ್ದು. ಒಟ್ಟು ಸದಸ್ಯರ ಸಂಖ್ಯೆಯ ಅರ್ಧದಷ್ಟು ಹಾಜರಿದ್ದ ಹೊರತು ಯಾವುದೇ ಸಭೆಯಲ್ಲಿ ಯಾವುದೇ ಕಾರ್ಯಕಲಾಪವನ್ನು ನಡೆಸತಕ್ಕದ್ದಲ್ಲ.

(3) ಅಧ್ಯಕ್ಷ ಅಥವಾ ಯಾವುದೇ ಸಭೆಗೆ ಹಾಜರಾಗಲು ಅವನು ಯಾವುದೇ ಕಾರಣಕ್ಕಾಗಿ ಅಸಮರ್ಥನಾದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರಿಂದ ಆಯ್ಕೆಗೊಂಡ ಯಾವೊಬ್ಬ ಇತರ ಸದಸ್ಯನು, ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಪ್ರಾಧಿಕಾರದ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಸಮಾನ ಮತಗಳು ಬಿದ್ದ ಪ್ರಸಂಗದಲ್ಲಿ, ಅಧ್ಯಕ್ಷರು ಅಥವಾ ಅವರ ಗೈರು ಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(5) ಸದಸ್ಯನು, ಪ್ರಾಧಿಕಾರದ ಅಥವಾ ಅದರ ಸಮಿತಿಯ ಯಾವುದೇ ಸಭೆಯಲ್ಲಿ ತಾನೇ ಸ್ವತಃ ಅಥವಾ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇಷೇರು ಅಥವಾ ಹಿತಾಸಕ್ತಿ ಹೊಂದಿರುವ ಯಾವುದೇ ವಿಷಯದ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಆ ವಿಷಯದ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ.

**9. ಸಮಿತಿಗಳ ನೇಮಕಾತಿ.–** (1) ಪ್ರಾಧಿಕಾರವು, ಆಗಿಂದಾಗ್ಗೆ, ತಾನು ಉಚಿತವೆಂದು ಭಾವಿಸಬಹುದಾದ ಅಂಥ ಅಧ್ಯಕ್ಷ, ಕಮಿಷನರು ಮತ್ತು ಅಂಥ ಇತರ ಸದಸ್ಯರನ್ನೊಳಗೊಂಡ ಸಮಿತಿಗಳನ್ನು ನೇಮಿಸಬಹುದು ಮತ್ತು ಸರ್ಕಾರದ ಅನುಮೋದನೆಯೊಂದಿಗೆ, ನಿಯಮಿಸಬಹುದಾದ ಅಂಥ ರೀತಿಯಲ್ಲಿ, ಅಂಥ ಅವಧಿಗೆ, ಅಂಥ ಸಮಿತಿಗಳಲ್ಲಿ, ತಾನು ಅಪೇಕ್ಷಿಸುವ, ಸಹಾಯ ಅಥವಾ ಸಲಹೆಯನ್ನು ನೀಡಬಲ್ಲ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಸಹವರ್ತಿಯಾಗಿ ಮಾಡಬಹುದು ಮತ್ತು ವಿಚಾರಣೆ ನಡೆಸಿ ವರದಿ ನೀಡಲು ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಅಂಥ ಸಮಿತಿಗಳಿಗೆ ಕಳುಹಿಸಿಕೊಡಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರತಿಯೊಂದು ಸಮಿತಿಯು, ಪ್ರಾಧಿಕಾರವು ಆಗಿಂದಾಗ್ಗೆ ಅದಕ್ಕೆ ನೀಡಬಹುದಾದ ಯಾವುವೇ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಪ್ರಾಧಿಕಾರವು ಹಾಗೆ ನೇಮಕಗೊಂಡ ಯಾವುದೇ ಸಮಿತಿಯ ರಚನೆಯನ್ನು ಯಾವುದೇ ಸಮಯದಲ್ಲಿ ಬದಲಾಯಿಸಬಹುದು ಅಥವಾ ಯಾವುದೇ ಅಂಥ ನೇಮಕಾತಿಯನ್ನು ರದ್ದುಪಡಿಸಬಹುದು. ಅಧ್ಯಕ್ಷರು ಪ್ರತಿಯೊಂದು ಅಂಥ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು.

**10. ಭಿನ್ನ ಭಿನ್ನ ಪ್ರಾಧಿಕಾರಗಳ ಅಧಿಕಾರಗಳು.–** (1) ಕಮಿಷನರು, ಪ್ರಾಧಿಕಾರದ ಪರವಾಗಿ ಯಾವುದೇ ಅಂದಾಜಿಗೆ ಮಂಜೂರಾತಿ ನೀಡಬಹುದು, ಟೆಂಡರುಗಳನ್ನು ಕರೆಯಬಹುದು ಅಥವಾ ತಮ್ಮ ಪರವಾಗಿ ಅಂಥ

ಕರಾರು ಅಥವಾ ಒಪ್ಪಂದವನ್ನು ಮಾಡಿಕೊಂಡಿದ್ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಅವರು ಬದ್ಧರಾಗಬಹುದಾಗಿದ್ದ ಅಂಥ ರೀತಿಯಲ್ಲಿ ಮತ್ತು ಪ್ರಪತ್ರದಲ್ಲಿ ಅದರ ಮೌಲ್ಯ ಅಥವಾ ಮೊತ್ತವು ಐದು ಲಕ್ಷ ರೂ. ಗಳನ್ನು ಮೀರದಂತೆ ಯಾವುದೇ ಕರಾರು ಅಥವಾ ಒಪ್ಪಂದವನ್ನು ಮಾಡಿಕೊಳ್ಳಬಹುದು ಮತ್ತು ಪ್ರತಿಯೊಂದು ಅಂಥ ಕರಾರು ಅಥವಾ ಒಪ್ಪಂದದ ಬಗ್ಗೆ ಪ್ರಾಧಿಕಾರಕ್ಕೆ ಪ್ರಾಧಿಕಾರದ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು.

(2) ಪ್ರಾಧಿಕಾರವು ಯಾವುದೇ ಅಂದಾಜಿಗೆ ಮಂಜೂರಾತಿ ನೀಡಬಹುದು, ಟೆಂಡರುಗಳನ್ನು ಕರೆಯಬಹುದು ಅಥವಾ ಇಪ್ಪತ್ತೈದು ಲಕ್ಷ ರೂ. ಗಳ ಮೌಲ್ಯವನ್ನು ಮೀರದ ಯಾವುದೇ ಕರಾರು ಅಥವಾ ಒಪ್ಪಂದ ಮಾಡಿಕೊಳ್ಳಬಹುದು.

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಕರಾರು ಅಥವಾ ಒಪ್ಪಂದವಲ್ಲದ, ಪ್ರಾಧಿಕಾರದ ಪರವಾಗಿ ಮಾಡಿಕೊಳ್ಳಲಾದ ಪ್ರತಿಯೊಂದು ಕರಾರು ಅಥವಾ ಒಪ್ಪಂದವು ಲಿಖಿತದಲ್ಲಿರತಕ್ಕದ್ದು ಮತ್ತು ಪ್ರಾಧಿಕಾರದ ಸಾಮಾನ್ಯ ಮೊಹರಿನೊಂದಿಗೆ ಅದಕ್ಕೆ ಕಮಿಷನರು ಮತ್ತು ಅಧ್ಯಕ್ಷರ ಸಹಿ ಇರತಕ್ಕದ್ದು.

(4) ಅಂಥ ಯಾವುದೇ ಟೆಂಡರಿನ ಅಂಗೀಕಾರವು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

(5) ಈ ಪ್ರಕರಣದಲ್ಲಿ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಉಪಬಂಧಿಸಲಾದಂತೆ ಮಾಡದಿರುವ ಅಥವಾ ಬರೆದುಕೊಡದಿರುವ ಕರಾರು ಅನೂರ್ಜಿತವಾಗತಕ್ಕದ್ದು ಮತ್ತು ಪ್ರಾಧಿಕಾರವನ್ನು ಬದ್ಧಗೊಳಿಸುವಂಥದ್ದಾಗಿರತಕ್ಕದ್ದಲ್ಲ.

**11. ಪ್ರಾಧಿಕಾರವು ತನ್ನ ಮೂಲಕವಾದ ಅಥವಾ ತನ್ನ ವಿರುದ್ಧದ ಕ್ಲೇಮುಗಳನ್ನು ರಾಜಿ ಮಾಡಿಕೊಳ್ಳಬಹುದು.-** ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತಾನು ಮಾಡಿಕೊಂಡ ಯಾವುದೇ ಕರಾರಿನಿಂದ ಉದ್ಭವಿಸಿದ ಯಾವುದೇ ಕ್ಲೇಮು ಅಥವಾ ತಗಾದೆಯನ್ನು ಅಥವಾ ತನ್ನಿಂದ ಅಥವಾ ತನ್ನ ವಿರುದ್ಧವಾಗಿ ಹೂಡಲಾದ ಯಾವುದೇ ಕ್ರಮ ಅಥವಾ ದಾವೆಯನ್ನು ತಾನು ಸಾಕಷ್ಟು ಮೊತ್ತವೆಂದು ಭಾವಿಸತಕ್ಕ ಅಂಥ ಮೊತ್ತಕ್ಕೆ ಅಥವಾ ಇತರ ಪರಿಹಾರಕ್ಕೆ ಪ್ರತಿಯಾಗಿ ರಾಜಿ ಮಾಡಿಕೊಳ್ಳಬಹುದು :

ಪರಂತು, ಸರ್ಕಾರದ ಪೂರ್ವಾನುಮೋದನೆ ಇದ್ದ ಹೊರತು, ಐವತ್ತು ಸಾವಿರ ರೂಪಾಯಿಗಳನ್ನು ಮೀರಿದ ಅಂಥ ಯಾವುದೇ ಕ್ಲೇಮು ಅಥವಾ ತಗಾದೆಯನ್ನು ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

**12. ಕಮಿಷನರ ನೇಮಕಾತಿ.-** (1) ಸರ್ಕಾರವು 'ಎ' ಗುಂಪಿನ ಅಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯದಲ್ಲದ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಕಮಿಷನರ್ ಆಗಿ ನೇಮಿಸತಕ್ಕದ್ದು.

(2) ಕಮಿಷನರು, ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದ ಅಂಥ ಮಾಸಿಕ ವೇತನ ಮತ್ತು ಇತರ ಭತ್ಯವನ್ನು ಪಡೆಯತಕ್ಕದ್ದು.

(3) ಸರ್ಕಾರವು, ಆಗಿಂದಾಗ್ಗೆ, ತಾನು ಉಚಿತವೆಂದು ಭಾವಿಸುವ ಅಂಥ ಅವಧಿಗೆ ಕಮಿಷನರಿಗೆ ಗೈರು ಹಾಜರಿಯ ರಜೆಯನ್ನು ನೀಡಬಹುದು. ಅಂಥ ರಜೆ ನೀಡಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅಧ್ಯಕ್ಷನಿಗೆ ಕಳುಹಿಸತಕ್ಕದ್ದು.

**13. ಕಮಿಷನರ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಕಮಿಷನರು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಕಮಿಷನರು ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(ಎ) ಪ್ರಾಧಿಕಾರದ ಗೊತ್ತುವಳಿಗಳನ್ನು ಜಾರಿಗೊಳಿಸತಕ್ಕದ್ದು:

ಪರಂತು, ಪ್ರಾಧಿಕಾರದ ಯಾವುದೇ ಗೊತ್ತುವಳಿಯು, ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನು ಅಥವಾ ಯಾವುದೇ ನಿಯಮ, ಅಧಿಸೂಚನೆ, ವಿನಿಯಮ ಅಥವಾ ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಉಪ ಕಾನೂನಿನ ಯಾವುದೇ ಉಪಬಂಧವನ್ನು ಅಥವಾ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುವುದೆಂದು ಅಥವಾ ಪ್ರಾಧಿಕಾರದ

ಹಿತಾಸಕ್ತಿಗೆ ಪ್ರತಿಕೂಲವಾದುದೆಂದು ಅಥವಾ ಹಾನಿಕರವಾದುದೆಂದು ಕಮಿಷನರು ಅಭಿಪ್ರಾಯಪಟ್ಟರೆ, ಅವರು, ಗೊತ್ತುವಳಿಯನ್ನು ಹೊರಡಿಸಿದ ಹದಿನೈದು ದಿನಗಳೊಳಗಾಗಿ ವಿಷಯವನ್ನು, ಆದೇಶಕ್ಕಾಗಿ ಸರ್ಕಾರಕ್ಕೆ ತಿಳಿಸಿ, ತಾನು ಕೈಗೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ಅದರ ಮುಂದಿನ ಸಭೆಯಲ್ಲಿ ತಿಳಿಸತಕ್ಕದ್ದು ಮತ್ತು ಅಂಥ ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಆದೇಶಗಳನ್ನು ಸ್ವೀಕರಿಸುವವರೆಗೆ ಗೊತ್ತುವಳಿಯನ್ನು ಜಾರಿಗೊಳಿಸಲು ಕಮಿಷನರು ಬದ್ಧರಾಗತಕ್ಕದ್ದಲ್ಲ ;

(ಬಿ) ಪ್ರಾಧಿಕಾರದ ಪತ್ರವ್ಯವಹಾರವನ್ನು ಇಡತಕ್ಕದ್ದು ಮತ್ತು ನಡೆಸತಕ್ಕದ್ದು ;

(ಸಿ) ಸರ್ಕಾರವು ನಿರ್ದೇಶಿಸಬಹುದಾದ ಅಂಥ ಸ್ಕೀಮುಗಳನ್ನು ಮತ್ತು ಕಾಮಗಾರಿಗಳನ್ನು ನೆರವೇರಿಸುವುದು ಮತ್ತು ಕಾರ್ಯಗತಗೊಳಿಸುವುದು ಮತ್ತು ಅದಕ್ಕಾಗಿ ಅಗತ್ಯವಾದ ವೆಚ್ಚಗಳನ್ನು ಭರಿಸುವುದು ;

(ಡಿ) ಪ್ರಾಧಿಕಾರದ ಸ್ಕೀಮುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಜವಾಬ್ದಾರನಾಗಿರುವುದು ;

(ಇ) ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿರ್ವಹಿಸುವುದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನಿಡುವುದಕ್ಕೆ ಜವಾಬ್ದಾರನಾಗಿರುವುದು;

(ಎಫ್) ಪ್ರಾಧಿಕಾರದ ಎಲ್ಲ ಅಧಿಕಾರಿಗಳು ಮತ್ತು ನೌಕರರ ಲೆಕ್ಕಪತ್ರಗಳು ಮತ್ತು ವ್ಯವಹರಣೆಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸುವುದು ಮತ್ತು ಕಾರ್ಯನಿರ್ವಹಣಾ ಆಡಳಿತದ ವಿಷಯಗಳು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳು ಮತ್ತು ಅಭಿಲೇಖಗಳಿಗೆ ಸಂಬಂಧಪಟ್ಟ ವಿಷಯಗಳು ಮತ್ತು 52ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಷ್ಟುಮಟ್ಟಿಗೆ ಅಂಥ ಅಧಿಕಾರಿಗಳು ಮತ್ತು ನೌಕರರ ಸೇವೆ ಮತ್ತು ಅವರ ವೇತನ, ವಿಶೇಷಾಧಿಕಾರಗಳು ಮತ್ತು ಭತ್ಯಗಳಿಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವುದು;

(ಜಿ) ಪ್ರಾಧಿಕಾರದ ವ್ಯವಹರಣೆಗಳ ಸಂಕ್ಷಿಪ್ತ ದಾಖಲೆಗಳ ಒಂದು ಪ್ರತಿಯನ್ನು ಮತ್ತು ಸರ್ಕಾರವು ಆಗಿಂದಾಗ್ಗೆ ಕೇಳಬಹುದಾದ ಯಾವುದೇ ವರದಿ ಅಥವಾ ಇತರ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುವುದು ; ಮತ್ತು

(ಎಚ್) ಪ್ರಾಧಿಕಾರದ ಎಲ್ಲ ಅನುಮತಿಗಳು, ಆದೇಶಗಳು, ತೀರ್ಮಾನಗಳು, ನೋಟೀಸುಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಪ್ರಾಧಿಕಾರದ ಆದೇಶಗಳನ್ನು ತನ್ನ ಸಹಿ ಮೂಲಕ ಪ್ರಮಾಣೀಕರಿಸುವುದು.

(3) ಕಮಿಷನರು, ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ರಾಜ್ಯ ಸರ್ಕಾರದ ಪ್ರಧಾನ ಇಲಾಖಾ ಮುಖ್ಯಸ್ಥನ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

**14. ಪ್ರಾಧಿಕಾರದ ಉದ್ದೇಶಗಳು.-** ನಗರ ಪ್ರದೇಶದ ಅಭಿವೃದ್ಧಿ ಯೋಜನೆ, ಪ್ರವರ್ಧನೆ ಮತ್ತು ಸಾಧನೆಯು ಪ್ರಾಧಿಕಾರದ ಉದ್ದೇಶಗಳಾಗಿರತಕ್ಕದ್ದು ಮತ್ತು ಈ ಉದ್ದೇಶಗಳಿಗಾಗಿ ಪ್ರಾಧಿಕಾರಕ್ಕೆ ಕಟ್ಟಡ, ಇಂಜಿನಿಯರಿಂಗ್ ಮತ್ತು ಇತರ ಕಾರ್ಯಾಚರಣೆಗಳನ್ನು ಕೈಗೊಳ್ಳಲು ತನ್ನ ಅಧಿಕಾರ ವ್ಯಾಪ್ತಿಯೊಳಗಿರುವ ನಗರ ಪ್ರದೇಶದ ಒಳಗಿರುವ ಅಥವಾ ಹೊರಗಿರುವ ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ, ನಿರ್ವಹಿಸುವ ಮತ್ತು ವಿಲೆ ಮಾಡುವ ಮತ್ತು ಸಾಮಾನ್ಯವಾಗಿ ಅಂಥ ಅಭಿವೃದ್ಧಿಯ ಉದ್ದೇಶಕ್ಕಾಗಿ ಮತ್ತು ಅದಕ್ಕೆ ಪೂರಕವಾದ ಉದ್ದೇಶಗಳಿಗಾಗಿ ಅವಶ್ಯವಿರುವ ಎಲ್ಲ ಕೆಲಸಗಳನ್ನು ಮಾಡುವ ಅಧಿಕಾರವಿರತಕ್ಕದ್ದು.

## ಅಧ್ಯಾಯ III

## ಅಭಿವೃದ್ಧಿ ಸ್ಕೀಮುಗಳು

**15. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ ಮುಂತಾದವುಗಳಿಗಾಗಿ ವೆಚ್ಚವನ್ನು ವಹಿಸಲು ಪ್ರಾಧಿಕಾರದ ಅಧಿಕಾರ.-** (1) ಪ್ರಾಧಿಕಾರವು,-

(ಎ) ನಗರ ಪ್ರದೇಶದ ಅಭಿವೃದ್ಧಿಗಾಗಿ ವಿಸ್ತೃತ ಸ್ಕೀಮು (ಇದರಲ್ಲಿ ಇನ್ನು ಮುಂದೆ "ಅಭಿವೃದ್ಧಿ ಸ್ಕೀಮು" ಎಂದು ಉಲ್ಲಿಖಿತವಾದ)ಗಳನ್ನು ರೂಪಿಸಬಹುದು ; ಮತ್ತು

(ಬಿ) ಸರ್ಕಾರದ ಪೂರ್ವಾನುಮೋದನೆಯೊಂದಿಗೆ ನಗರ ಪ್ರದೇಶದ ಅಭಿವೃದ್ಧಿಗಾಗಿ ಆಗಿಂದಾಗ್ಗೆ ಯಾವುವೇ ಕಾಮಗಾರಿಗಳನ್ನು ಕೈಗೊಳ್ಳಬಹುದು ಮತ್ತು ಅದಕ್ಕಾಗಿ ಮತ್ತು ಅಭಿವೃದ್ಧಿ ಸ್ಕೀಮುಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲೂ ಸಹ ವೆಚ್ಚಗಳನ್ನು ವಹಿಸಬಹುದು.

(2) ಪ್ರಾಧಿಕಾರವು,-

(i) ತನ್ನ ಸಂಪನ್ಮೂಲಗಳು ಸಾಕಷ್ಟಿದೆಯೆಂದು ಮನದಟ್ಟಾದರೆ ಸ್ವಪ್ರೇರಣೆಯಿಂದ ; ಅಥವಾ

(ii) ಯಾವುದೇ ಸ್ಕೀಮನ್ನು ರೂಪಿಸಲು ಮತ್ತು ಕೈಗೊಳ್ಳಲು ಸ್ಥಳೀಯ ಪ್ರಾಧಿಕಾರವು ಪ್ರಾಧಿಕಾರದ ವಶಕ್ಕೆ ಅಗತ್ಯದ ನಿಧಿಗಳನ್ನು ನೀಡಿದ್ದರೆ, ಸ್ಥಳೀಯ ಪ್ರಾಧಿಕಾರದ ಶಿಫಾರಸ್ಸಿನ ಮೇಲೆ ; ಅಥವಾ

(iii) ಅನ್ಯಥಾ,

- ಆಗಿಂದಾಗ್ಗೆ ಯಾವುದೇ ಹೊಸ ಅಥವಾ ಹೆಚ್ಚಿನ ಅಭಿವೃದ್ಧಿ ಸ್ಕೀಮುಗಳನ್ನು ರೂಪಿಸಬಹುದು ಮತ್ತು ಕೈಗೊಳ್ಳಬಹುದು.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು, ತಾನು ಅಗತ್ಯವೆಂದು ಭಾವಿಸಿದಾಗಲೆಲ್ಲ, ಸರ್ಕಾರವು ಸ್ಪಷ್ಟಪಡಿಸಬಹುದಾದ ಅಂಥ ನಿಬಂಧನೆಗಳು ಮತ್ತುಷರತ್ತುಗಳಿಗೆ ಒಳಪಟ್ಟು ಯಾವುದೇ ಅಭಿವೃದ್ಧಿ ಸ್ಕೀಮು ಅಥವಾ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಅದನ್ನು ಕಾರ್ಯಗತಗೊಳಿಸಲು ಪ್ರಾಧಿಕಾರವನ್ನು ಅಗತ್ಯಪಡಿಸಬಹುದು.

**16. ಒಂದು ಅಭಿವೃದ್ಧಿ ಸ್ಕೀಮಿನಲ್ಲಿ ಉಪಬಂಧ ಕಲ್ಪಿಸಬೇಕಾದ ವಿವರಗಳು.**- 15ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅಭಿವೃದ್ಧಿ ಸ್ಕೀಮು,-

(1) ಯೋಜನೆಯಲ್ಲಿ ಸಮಾವೇಶವಾದ ಪ್ರದೇಶದ ಪರಿಮಿತಿಗಳೊಳಗೆ,-

(ಎ) ಸ್ಕೀಮನ್ನು ಕಾರ್ಯಗತಗೊಳಿಸುವುದಕ್ಕೆ ಅವಶ್ಯಕವೆಂದು ಅಥವಾ ಸ್ಕೀಮನ್ನು ಕಾರ್ಯಗತಗೊಳಿಸುವುದರಿಂದ ಬಾಧಿತವಾಗಿದೆಯೆಂದು ಪ್ರಾಧಿಕಾರವು ಅಭಿಪ್ರಾಯಪಡುವ ಯಾವುದೇ ಭೂಮಿಯ ಆರ್ಜನೆಗಾಗಿ ;

(ಬಿ) ಕಟ್ಟಡಗಳ ನಿರ್ಮಾಣ ಮತ್ತು ಪುನರ್‌ನಿರ್ಮಾಣ ಮತ್ತು ಬೀದಿಗಳ ರಚನೆ ಮತ್ತು ಅವುಗಳಲ್ಲಿನ ಮಾರ್ಪಾಡು ಸೇರಿದಂತೆ ಎಲ್ಲ ಅಥವಾ ಯಾವುದೇ ಭೂಮಿಯ ರೂಪಣ ಮತ್ತು ಪುನರ್ ರೂಪಣಕ್ಕಾಗಿ ;

(ಸಿ) ಚರಂಡಿ ವ್ಯವಸ್ಥೆ, ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿಗಾಗಿ ;

(ಡಿ) ಲೇಔಟಿನ ಒಟ್ಟು ಪ್ರದೇಶದ ಶೇಕಡಾ ಹದಿನೈದಕ್ಕೆ ಕಡಿಮೆಯಿಲ್ಲದ ಪ್ರದೇಶವನ್ನು ಸಾರ್ವಜನಿಕ ಉದ್ಯಾನಗಳು ಮತ್ತು ಆಟದ ಮೈದಾನಗಳಿಗಾಗಿ ಮತ್ತು ಲೇಔಟಿನ ಒಟ್ಟು ಪ್ರದೇಶದ ಶೇಕಡ ಹತ್ತಕ್ಕೆ ಕಡಿಮೆಯಿಲ್ಲದ ಹೆಚ್ಚಿನ ಪ್ರದೇಶವನ್ನು ನಾಗರಿಕ ಸೌಲಭ್ಯಗಳಿಗಾಗಿ ಮೀಸಲಿಡುವುದಕ್ಕಾಗಿ,

- ಏರ್ಪಾಡು ಮಾಡತಕ್ಕದ್ದು.

(2) ಪೂರ್ವೋಕ್ತ ಪರಿಮಿತಿಗಳೊಳಗೆ,-

(ಎ) ಉತ್ತಮ ಚರಂಡಿ ವ್ಯವಸ್ಥೆಯ ಸೌಕರ್ಯವನ್ನು ಒದಗಿಸುವುದಕ್ಕಾಗಿ, ಪ್ರಾಧಿಕಾರವು ಎತ್ತರಿಸುವುದು ಯುಕ್ತವೆಂದು ಪರಿಗಣಿಸಬಹುದಾದ ಯಾವುದೇ ಭೂಮಿಯನ್ನು ಎತ್ತರಿಸುವುದಕ್ಕಾಗಿ;

(ಬಿ) ಸ್ಕೀಮಿನಲ್ಲಿ ಸೇರಿರುವ ಪ್ರದೇಶ ಅಥವಾ ಅದಕ್ಕೆ ಹೊಂದಿಕೊಂಡಿರುವ ಪ್ರದೇಶದ ಉತ್ತಮ ಗಾಳಿ ವ್ಯವಸ್ಥೆಗಾಗಿ ಖಾಲಿ ಜಾಗಗಳನ್ನು ಕಲ್ಪಿಸುವುದಕ್ಕಾಗಿ;

(ಸಿ) ಅಗತ್ಯವಿರುವ ನೈರ್ಮಲ್ಯ ವ್ಯವಸ್ಥೆಗಳಿಗಾಗಿ;

(ಡಿ) ಮಾರುಕಟ್ಟೆ ಅಥವಾ ಇತರ ಸಾರ್ವಜನಿಕ ಅಗತ್ಯಗಳು ಅಥವಾ ಅನುಕೂಲಗಳ ಸ್ಥಾಪನೆ ಅಥವಾ ನಿರ್ಮಾಣಕ್ಕಾಗಿ,

- ಉಪಬಂಧ ಕಲ್ಪಿಸಬಹುದು; ಮತ್ತು

(3) ಪೂರ್ವೋಕ್ತ ಪರಿಮಿತಿಗಳೊಳಗೆ ಅಥವಾ ಅವುಗಳಿಲ್ಲದೆಯೇ, ಮನೆಗಳ ನಿರ್ಮಾಣಕ್ಕೆ ಉಪಬಂಧ ಕಲ್ಪಿಸಬಹುದು.

**17. ಯೋಜನೆಯನ್ನು ಪೂರ್ಣಗೊಳಿಸಿದ ಮೇಲೆ ಕಾರ್ಯವಿಧಾನ.**- (1) ಒಂದು ಅಭಿವೃದ್ಧಿ ಸ್ಕೀಮನ್ನು ಸಿದ್ಧಪಡಿಸಿದಾಗ, ಪ್ರಾಧಿಕಾರವು ಸ್ಕೀಮನ್ನು ರೂಪಿಸಲಾಗಿದೆಯೆಂಬ ಅಂಶದ ಹೇಳಿಕೆಯನ್ನು, ಮತ್ತು ಅದರಲ್ಲಿ

ಒಳಗೊಂಡಿರುವ ಪ್ರದೇಶದ ಪರಿಮಿತಿಗಳು ಮತ್ತು ಯಾವ ಸ್ಥಳದಲ್ಲಿ ಎಂಬ ಬಗೆಗಿನ ಸ್ಕೀಮಿನ ವಿವರಗಳು, ಅದರಲ್ಲಿ ಒಳಗೊಂಡ ಕ್ಷೇತ್ರದ ನಕ್ಷೆ, ಆರ್ಜನೆ ಮಾಡಲು ಉದ್ದೇಶಿಸಲಾದ ಭೂಮಿಯನ್ನುಪಡಿಸುವ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಬಹುದಾದ ಭೂಮಿಯ ಕುರಿತ ಹೇಳಿಕೆ ನೀಡಿ ಎಲ್ಲ ಸಮುಚಿತ ಅವಧಿಗಳಲ್ಲಿ ನೋಡಬಹುದಾದ ಸ್ಥಳವನ್ನು ಹೆಸರಿಸುವಂಥ ಒಂದು ಅಧಿಸೂಚನೆಯನ್ನು ಸಿದ್ಧಪಡಿಸತಕ್ಕದ್ದು.

(2) ಸದರಿ ಅಧಿಸೂಚನೆಯ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು, ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸ್ಥಳೀಯ ಪ್ರಾಧಿಕಾರವು ಸ್ಕೀಮಿನ ಬಗ್ಗೆ ಮಾಡಲು ತಾನು ಉಚಿತವೆಂದು ಭಾವಿಸುವ ಯಾವುದೇ ಮನವಿ ಪತ್ರವನ್ನು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಸರ್ಕಾರಕ್ಕೆ ರವಾನಿಸುವುದಕ್ಕಾಗಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(3) ಪ್ರಾಧಿಕಾರವು, ಸದರಿ ಅಧಿಸೂಚನೆಯ ಪ್ರತಿಯನ್ನು ಪ್ರದೇಶದಲ್ಲಿ ವ್ಯಾಪಕ ಪ್ರಸಾರವಿರುವ ಸ್ಥಳೀಯ ವೃತ್ತಪತ್ರಿಕೆಗಳ ಎರಡು ನಿರಂತರ ಸಂಚಿಕೆಗಳಲ್ಲಿ ಪ್ರಕಟವಾಗುವಂತೆ ಮತ್ತು ತನ್ನ ಕಛೇರಿ, ಡೆಪ್ಯುಟಿ ಕಮಿಷನರ ಕಛೇರಿ, ಸ್ಥಳೀಯ ಪ್ರಾಧಿಕಾರದ ಕಛೇರಿ, ಮತ್ತು ಪ್ರಾಧಿಕಾರವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಇತರ ಸ್ಥಳಗಳಲ್ಲಿಯ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(4) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಸ್ಥಳೀಯ ಪ್ರಾಧಿಕಾರವು ಯಾವುದೇ ಮನವಿ ಪತ್ರವನ್ನು ಸ್ವೀಕರಿಸದಿದ್ದರೆ, ಸ್ಥಳೀಯ ಪ್ರಾಧಿಕಾರವು ಯೋಜನೆಗೆ ಸಹಮತಿ ನೀಡಿದೆಯೆಂದು ಭಾವಿಸತಕ್ಕದ್ದು.

(5) ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ ಪ್ರಾಧಿಕಾರವು ಸ್ಕೀಮನ್ನು ಕಾರ್ಯಗತಗೊಳಿಸಲು ಆರ್ಜಿಸಬೇಕೆಂದು ಪ್ರಸ್ತಾವಿಸಿರುವ ಅಥವಾ ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಸ್ತಾವಿಸಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಮೇಲೆ ಆಸ್ತಿ ತೆರಿಗೆ ಅಥವಾ ಭೂ ಕಂದಾಯ ನಿರ್ಧರಣೆಯನ್ನು ಸಂದಾಯ ಮಾಡಲು ಪ್ರಪ್ರಥಮವಾಗಿ ಬದ್ಧನಾಗಿರುವ ಬಗ್ಗೆ ಸ್ಥಳೀಯ ಪ್ರಾಧಿಕಾರದ ನಿರ್ಧರಣಾ ಪಟ್ಟಿಯಲ್ಲಿ ಅಥವಾ ಭೂಕಂದಾಯದ ರಿಜಿಸ್ಟರಿನಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಗೂ ನೋಟೀಸನ್ನು ಕಳುಹಿಸಿ, ಅಂಥ ಕಟ್ಟಡ ಅಥವಾ ಭೂಮಿಯ ಆರ್ಜನೆ ಮತ್ತು ಪುರೋಭಿವೃದ್ಧಿ ತೆರಿಗೆ ವಸೂಲಿಯನ್ನು ಏಕೆ ಮಾಡಬಾರದು ಎಂಬುದಕ್ಕೆ, ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾರಣವನ್ನು ತೋರಿಸಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(6) ಕಮಿಷನರಿಂದ ಸಹಿ ಆದ ಅಥವಾ ಅವರ ಆದೇಶಾನುಸಾರ ಸಹಿ ಮಾಡಲಾದ ನೋಟೀಸನ್ನು,-

(ಎ) ಖುದ್ದಾಗಿ ರವಾನಿಸುವ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರು ಹಾಜರಿದ್ದರೆ ಅಥವಾ ಕಂಡು ಬರದಿದ್ದರೆ ಅವನ ಏಜಂಟಿಗೆ ಅಥವಾ ಅಂಥ ಏಜಂಟ್ ಇಲ್ಲದಿದ್ದರೆ, ಭೂಮಿ ಅಥವಾ ಕಟ್ಟಡದ ಮೇಲೆ ಅದನ್ನು ಇಡುವ ಮೂಲಕ; ಅಥವಾ

(ಬಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸದ ಅಥವಾ ವ್ಯವಹಾರದ ಸ್ಥಳದಲ್ಲಿ ಅದನ್ನು ಇಡುವ ಮೂಲಕ ; ಅಥವಾ

(ಸಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸ ಅಥವಾ ವ್ಯವಹಾರದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ,

- ಜಾರಿಗೊಳಿಸತಕ್ಕದ್ದು.

**18. ಸ್ಕೀಮಿನ ಮಂಜೂರಾತಿ.**- (1) 17ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಸ್ಕೀಮಿನ ಪ್ರಕಟಣೆ ಮತ್ತು ನೋಟೀಸುಗಳ ಜಾರಿಯ ತರುವಾಯ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಸ್ವೀಕರಿಸಲಾದ ಮನವಿ ಪತ್ರಗಳು, ಯಾವುವಾದರೂ ಇದ್ದರೆ, ಅವುಗಳನ್ನು ಪರಿಶೀಲಿಸಿದ ತರುವಾಯ ಪ್ರಾಧಿಕಾರವು ಅದರಲ್ಲಿ ತಾನು ಉಚಿತವೆಂದು ಭಾವಿಸುವ ಅಂಥ ಮಾರ್ಪಾಡುಗಳನ್ನು ಮಾಡಿ,-

(ಎ) ಅದರಲ್ಲಿ ಸೇರಿಸಲಾದ ಯಾವುವೇ ಮಾರ್ಪಾಡುಗಳ ಬಗ್ಗೆ ಕಾರಣಗಳೂ ಸೇರಿದಂತೆ ಸ್ಕೀಮಿನ ಪೂರ್ಣ ವಿವರಗಳೊಂದಿಗೆ ವರ್ಣನೆ;

(ಬಿ) ಪೂರ್ಣ ನಕ್ಷೆಗಳು ಮತ್ತು ಸ್ಕೀಮನ್ನು ಕಾರ್ಯಗತಗೊಳಿಸಲು ತಗಲುವ ವೆಚ್ಚದ ಅಂದಾಜುಗಳು;

(ಸಿ) ಆರ್ಜಿಸಲು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸಿ ಒಂದು ವಿವರಣ ಪಟ್ಟಿ ;

(ಡಿ) 17ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಸ್ವೀಕರಿಸಲಾದ ಯಾವುದೇ ಮನವಿ ಪತ್ರ;

(ಇ) 17ನೇ ಪ್ರಕರಣದ ಅಡಿಯಲ್ಲಿ ಭೂಮಿಗೆ ಸಂಬಂಧಪಟ್ಟಂತೆ ಅಧಿಸೂಚನೆಯು ಪ್ರಕಟವಾದ ದಿನಾಂಕದಂದು ಮುನಿಸಿಪಲ್ ಕರ ನಿರ್ಧರಣಾ ಪುಸ್ತಕದಲ್ಲಿ ನಮೂದಿಸಲಾದಂತೆ ದಾಮಾಷದ ಮೌಲ್ಯವನ್ನು ಅಥವಾ (ಸಿ) ಉಪಖಂಡದ ಅಡಿಯಲ್ಲಿನ ವಿವರಣ ಪಟ್ಟಿಯಲ್ಲಿ ಷ್ಟಾರ್ದಿ ಪಡಿಸಲಾದ ಎಲ್ಲ ಭೂಮಿಯ ಭೂ ನಿರ್ಧರಣೆಯನ್ನು ತೋರಿಸುವ ಒಂದು ಅನುಸೂಚಿ ; ಮತ್ತು

(ಎಫ್) ನಿಯಮಿಸಬಹುದಾದ ಅಂಥ ಇತರ ವಿವರಗಳು, ಯಾವುವಾದರೂ ಇದ್ದರೆ,

- ಅವುಗಳನ್ನು ಒದಗಿಸಿ ಮಂಜೂರಾತಿಗಾಗಿ ಸ್ಕೀಮನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಯಾವುದೇ ಅಭಿವೃದ್ಧಿ ಸ್ಕೀಮಿನಲ್ಲಿ ಗೃಹ ನಿರ್ಮಾಣಕ್ಕಾಗಿ ಉಪಬಂಧ ಕಲ್ಪಿಸಿದ್ದರೆ, ಪ್ರಾಧಿಕಾರವು ಗೃಹ ನಿರ್ಮಾಣದ ನಕ್ಷೆ ಮತ್ತು ಅಂದಾಜುಗಳನ್ನು ಸಹ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) ತನಗೆ ಸಲ್ಲಿಸಲಾದ ಪ್ರಸ್ತಾವವನ್ನು ಪರಿಶೀಲಿಸಿದ ತರುವಾಯ ಸರ್ಕಾರವು, ಆದೇಶದ ಮೂಲಕ, ಸ್ಕೀಮಿಗೆ ಮಂಜೂರಾತಿ ನೀಡಬಹುದು.

**19. ಮಂಜೂರಾತಿಯ ತರುವಾಯ ಆರ್ಜಿಸಬೇಕಾದ ಭೂಮಿಯ ವಿವರಗಳನ್ನು ನೀಡಿ ಪ್ರಕಟಿಸಬೇಕಾದ ಘೋಷಣೆ.**- (1) ಸ್ಕೀಮನ್ನು ಮಂಜೂರು ಮಾಡಿದ ತರುವಾಯ, ಸರ್ಕಾರವು, ಅಂಥ ಮಂಜೂರಾತಿಯ ವಿಷಯವನ್ನು ಮತ್ತು ಸ್ಕೀಮಿನ ಉದ್ದೇಶಗಳಿಗಾಗಿ ಪ್ರಾಧಿಕಾರವು ಆರ್ಜಿಸಲು ಪ್ರಸ್ತಾವಿಸಿರುವ ಭೂಮಿಯು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿದೆಯೆಂಬುದನ್ನು ತಿಳಿಸಿ ಸರ್ಕಾರಿ ರಾಜ್ಯಪತ್ರದಲ್ಲಿ ಘೋಷಣೆಯನ್ನು ಪ್ರಕಟಿಸತಕ್ಕದ್ದು.

(2) ಘೋಷಣೆಯು, ಆರ್ಜಿಸಲು ಉದ್ದೇಶಿಸಿರುವ ಭೂಮಿಯು ಇರುವ ಪರಿಮಿತಿಗಳು, ಆ ಭೂಮಿಯು ಆಗತ್ಯವಾಗಿರುವ ಉದ್ದೇಶ, ಅದರ ಅಂದಾಜು ಪ್ರದೇಶ ಮತ್ತು ಭೂಮಿಯ ನಕ್ಷೆಯನ್ನು ತನಿಖೆ ಮಾಡಬಹುದಾದ ಸ್ಥಳವನ್ನು ತಿಳಿಸತಕ್ಕದ್ದು.

(3) ಸದರಿ ಘೋಷಣೆಯು ಒಂದು ಸಾರ್ವಜನಿಕ ಉದ್ದೇಶಗಳಿಗಾಗಿ ಭೂಮಿಯು ಅಗತ್ಯವಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಪ್ರಾಧಿಕಾರವು ಸದರಿ ಘೋಷಣೆಯ ಪ್ರಕಟಣೆ ತರುವಾಯ, ಸ್ಕೀಮನ್ನು ಜಾರಿಗೊಳಿಸಲು ಮುಂದುವರಿಯತಕ್ಕದ್ದು.

(4) ಸ್ಕೀಮಿನ ಯಾವುದೇ ಭಾಗದಲ್ಲಿ ಸುಧಾರಣೆ ಮಾಡಬಹುದೆಂದು ಯಾವುದೇ ಕಾಲದಲ್ಲಿ ಪ್ರಾಧಿಕಾರಕ್ಕೆ ಕಂಡುಬಂದರೆ, ಪ್ರಾಧಿಕಾರವು ಸದರಿ ಉದ್ದೇಶಕ್ಕಾಗಿ ಸ್ಕೀಮನ್ನು ಮಾರ್ಪಾಟು ಮಾಡಬಹುದು ಮತ್ತು (5) ಮತ್ತು (6)ನೇ ಉಪ-ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಹಾಗೆ ಮಾರ್ಪಾಟಾದಂತೆ ಸ್ಕೀಮನ್ನು ಕೂಡಲೇ ಜಾರಿಗೊಳಿಸಲು ಮುಂದುವರೆಯತಕ್ಕದ್ದು.

(5) ಸ್ಕೀಮನ್ನು ಮಾರ್ಪಾಟಾದ ರೀತಿಯಲ್ಲಿ ಜಾರಿಗೊಳಿಸಲು ಅಂದಾಜು ಮಾಡಲಾದ ವೆಚ್ಚವು, ಮಂಜೂರಾದ ಸ್ಕೀಮನ್ನು ಜಾರಿಗೊಳಿಸಲು ಅಂದಾಜು ಮಾಡಲಾದ ವೆಚ್ಚದ ಶೇಕಡಾ 5ಕ್ಕಿಂತ ಹೆಚ್ಚಿನ ಮೊತ್ತವನ್ನು ಮೀರಿದರೆ, ಪ್ರಾಧಿಕಾರವು ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಸ್ಕೀಮನ್ನು ಮಾರ್ಪಾಟಾದ ರೀತಿಯಲ್ಲಿ ಜಾರಿಗೊಳಿಸಲು ಮುಂದುವರಿಯತಕ್ಕದ್ದಲ್ಲ.

(6) ಮಾರ್ಪಾಟಾದ ರೀತಿಯಲ್ಲಿನ ಸ್ಕೀಮು 18ನೇ ಪ್ರಕರಣದ (1) ನೇ ಉಪಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿಯಲ್ಲಿ ನಿದಿಷ್ಟಪಡಿಸುವುದನ್ನು ಹೊರತುಪಡಿಸಿ, ಒಪ್ಪಂದದಿಂದಲ್ಲದೆ ಅನ್ಯಥಾ ಇತರ ಯಾವುದೇ ಭೂಮಿಯ ಆರ್ಜನೆಯನ್ನು ಒಳಗೊಂಡರೆ 17 ಮತ್ತು 18ನೇ ಪ್ರಕರಣಗಳ ಮತ್ತು ಈ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳು ಹಾಗೆ ಮಾರ್ಪಾಟಾದ ಸ್ಕೀಮಿನ ಭಾಗಕ್ಕೆ, ಅಂಥ ಮಾರ್ಪಟ್ಟ ಭಾಗವು, ಸ್ಕೀಮು ಎಂಬ ರೀತಿಯಲ್ಲಿಯೇ ಅನ್ವಯವಾಗತಕ್ಕದ್ದು.

(7) ಸರ್ಕಾರದ ನಿರ್ದಿಷ್ಟ ಆದೇಶಗಳಿಲ್ಲದೆ ಪ್ರಾಧಿಕಾರವು ಸ್ಕೀಮಿನಲ್ಲಿ ಸೇರಿದ ಯಾವುದೇ ಭೂಮಿಯನ್ನು ಅಧಿಸೂಚನೆಯಿಂದ ತೆಗೆದುಹಾಕುವುದಾಗಲೀ ಅಥವಾ ಮರು ಹಸ್ತಾಂತರ ಮಾಡುವುದಾಗಲೀ ಮಾಡತಕ್ಕದ್ದಲ್ಲ.

(8) ಸರ್ಕಾರದ ಆದೇಶಗಳಿಲ್ಲದೆ. ಪ್ರಾಧಿಕಾರವು, ಸ್ಕೀಮಿನಲ್ಲಿ ನಾಗರಿಕ ಸೌಕರ್ಯ ಪ್ರದೇಶವೆಂದು ಗುರುತಿಸಲಾದ ಯಾವುದೇ ಭೂಮಿಯನ್ನು ಖಾಸಗಿ ಸಂಸ್ಥೆಗೆ ಅಥವಾ ಪ್ರಾಧಿಕಾರಕ್ಕೆ ಹಂಚಿಕೆ ಮಾಡತಕ್ಕದ್ದಲ್ಲ.

**20. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು.**- (1) ಯಾವುದೇ ಅಭಿವೃದ್ಧಿ ಸ್ಕೀಮನ್ನು ಕಾರ್ಯಗತಗೊಳಿಸುವ ಪರಿಣಾಮದಿಂದಾಗಿ, ಕಾರ್ಯಗತಗೊಳಿಸುವುದಕ್ಕೆ ಅಗತ್ಯವಿರದ ಸ್ಕೀಮಿನಲ್ಲಿ ಸಮಾವೇಶವಾದ ಪ್ರದೇಶದಲ್ಲಿಯ ಯಾವುದೇ ಭೂಮಿಯ ಮಾರುಕಟ್ಟೆ ಮೌಲ್ಯವು ಹೆಚ್ಚಾಗಿದೆ ಅಥವಾ ಹೆಚ್ಚುವುದು ಎಂದು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ ಅಂಥ ಸ್ಕೀಮನ್ನು ಕಾರ್ಯಗತಗೊಳಿಸುವುದರ ಪರಿಣಾಮದಿಂದಾಗಿ ಭೂಮಿಯ ಮೌಲ್ಯದಲ್ಲಾಗುವ ಹೆಚ್ಚಳಕ್ಕೆ ಸಂಬಂಧಪಟ್ಟಂತೆ, ಆ ಭೂಮಿಯ ಒಡೆಯ ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಗೆ ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಲು ಪ್ರಾಧಿಕಾರ ಹಕ್ಕುಳ್ಳದ್ದಾಗಿರತಕ್ಕದ್ದು.

(2) ಮೌಲ್ಯದಲ್ಲಿಯ ಅಂಥ ಹೆಚ್ಚಳವು, ಸ್ಕೀಮನ್ನು ಕಾರ್ಯಗತಗೊಳಿಸಿದ ತರುವಾಯ ಭೂಮಿಯು ಕಟ್ಟಡ ರಹಿತವಾಗಿದ್ದಂತೆ ಅಂದಾಜು ಮಾಡಲಾದ ಭೂಮಿಯ ಮೌಲ್ಯವು, ಸ್ಕೀಮನ್ನು ಅರಂಭಿಸುವುದಕ್ಕೆ ಮುಂಚೆ ಅದೇ ರೀತಿಯಲ್ಲಿ ಅಂದಾಜು ಮಾಡಲಾದ ಭೂಮಿಯ ಮೌಲ್ಯವನ್ನು ಮೀರಿದ ಮೊತ್ತವಾಗಿರತಕ್ಕದ್ದು ಮತ್ತು ಪುರೋಭಿವೃದ್ಧಿ ತೆರಿಗೆಯು ಮೌಲ್ಯದ ಅಂಥ ಹೆಚ್ಚಳದ ಮೂರನೇ ಒಂದು ಭಾಗವಾಗಿರತಕ್ಕದ್ದು.

**21. ಪ್ರಾಧಿಕಾರದಿಂದ ಪುರೋಭಿವೃದ್ಧಿ ತೆರಿಗೆಯ ನಿರ್ಧರಣೆ.**- (1) ಅಭಿವೃದ್ಧಿ ಸ್ಕೀಮು, ನಿರ್ಧರಿಸಬೇಕಾದ ಪುರೋಭಿವೃದ್ಧಿ ತೆರಿಗೆಯ ಮೊತ್ತವನ್ನು ನಿರ್ಧರಿಸುವುದನ್ನು ಸಾಧ್ಯವಾಗಿಸಲು ಸಾಕಷ್ಟು ಪ್ರಗತಿ ಹೊಂದಿದೆ ಎಂದು ಪ್ರಾಧಿಕಾರಕ್ಕೆ ಕಂಡುಬಂದಾಗ ಪ್ರಾಧಿಕಾರವು ಈ ಬಗ್ಗೆ ಹೊರಡಿಸಲಾದ ಒಂದು ಗೊತ್ತುವಳಿಯ ಮೂಲಕ ಅಂಥ ತೆರಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸ್ಕೀಮಿನ ಕಾರ್ಯಾಚರಣೆಯು ಮುಗಿದಿರುವುದಾಗಿ ಭಾವಿಸತಕ್ಕದ್ದೆಂದು ಘೋಷಿಸತಕ್ಕದ್ದು ಮತ್ತು ತದನಂತರ ನಿರ್ಧರಣೆಯಾಗಬೇಕಾದ ಭೂಮಿಯ ಸಂಬಂಧದಲ್ಲಿ 17ನೇ ಪ್ರಕರಣದ (5)ನೇ ಉಪ-ಪ್ರಕರಣದ ಅಡಿಯಲ್ಲಿ, ಸಂದರ್ಭಾನುಸಾರ, ನೋಟೀಸು ನೀಡಲಾಗಿದ್ದ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯ ಹಿತಾಸಕ್ತ ವಾರಸುದಾರನಿಗೆ, 20ನೇ ಪ್ರಕರಣದ ಅಡಿಯಲ್ಲಿ ಅಂಥ ಭೂಮಿಯ ಸಂಬಂಧದಲ್ಲಿ ಸಂದೇಯವಿರುವ ಪುರೋಭಿವೃದ್ಧಿ ತೆರಿಗೆಯ ಮೊಬಲಗನ್ನು ನಿರ್ಧರಿಸಲು ಪ್ರಾಧಿಕಾರವು ಉದ್ದೇಶಿಸಿದೆ ಎಂದು ಲಿಖಿತದಲ್ಲಿ ನೋಟೀಸು ಕೊಡತಕ್ಕದ್ದು.

(2) ಪ್ರಾಧಿಕಾರವು ಅನಂತರ, ಸಂಬಂಧಪಟ್ಟ ಪ್ರತಿಯೊಬ್ಬ ವ್ಯಕ್ತಿಯಿಂದ ಸಂದೇಯವಿರುವ ಪುರೋಭಿವೃದ್ಧಿ ತೆರಿಗೆಯ ಮೊಬಲಗನ್ನು ಅಂಥ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರವಾಯ ನಿರ್ಧರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಅಂಥ ನಿರ್ಧರಣೆಯ ಲಿಖಿತ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ, ಅವನು ನಿರ್ಧರಣೆಯನ್ನು ಒಪ್ಪಿಕೊಳ್ಳುತ್ತಾನೋ ಇಲ್ಲವೊ ಎಂಬ ಬಗ್ಗೆ, ಪ್ರಾಧಿಕಾರಕ್ಕೆ ಬರಹದಲ್ಲಿ ತಿಳಿಸತಕ್ಕದ್ದು.

(3) ಪ್ರಾಧಿಕಾರವು ಪ್ರಸ್ತಾವಿಸಿದ ನಿರ್ಧರಣೆಯನ್ನು, ಸಂಬಂಧಪಟ್ಟ ವ್ಯಕ್ತಿಯು (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಒಪ್ಪಿದರೆ, ಅಂಥ ನಿರ್ಧರಣೆಯು ಅಂತಿಮವಾಗಿರತಕ್ಕದ್ದು.

(4) ಪ್ರಾಧಿಕಾರವು ಮಾಡಿದ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಒಪ್ಪದಿದ್ದರೆ ಅಥವಾ (2)ನೇ ಉಪ-ಪ್ರಕರಣದಲ್ಲಿ ಅಗತ್ಯಪಡಿಸಿದ ಮಾಹಿತಿಯನ್ನು ಅದರಲ್ಲಿ ಷ್ಟಪಡಿಸಿದ ಅವಧಿಯೊಳಗೆ ಪ್ರಾಧಿಕಾರಕ್ಕೆ ಕೊಡಲು ತಪ್ಪಿದರೆ ಪ್ರಾಧಿಕಾರವು, ಅಂಥ ವ್ಯಕ್ತಿಯಿಂದ ಸಂದೇಯವಿರುವ ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

**22. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ.**- 21ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಪುರೋಭಿವೃದ್ಧಿ ತೆರಿಗೆಯನ್ನು, ಸರ್ಕಾರವು ನಿಯಮಿಸಬಹುದಾದ ಅಂಥ ಕಾಲದೊಳಗೆ ಮತ್ತು ಐದಕ್ಕೆ ಮೀರದ ಅಥವಾ ಸರ್ಕಾರವು ಷ್ಟಪಡಿಸಬಹುದಾದ ಅಂಥ ಸಂಖ್ಯೆಯ ಕಂತುಗಳಲ್ಲಿ, ಸರ್ಕಾರವು ನಿಯಮಿಸಬಹುದಾದಂಥ ದರಗಳ ಬಡ್ಡಿಯ ಸಹಿತ ಸಂದಾಯ ಮಾಡತಕ್ಕದ್ದು.

**23. ಪುರೋಭಿವೃದ್ಧಿ ತೆರಿಗೆಯ ವಸೂಲಿ.-** ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರುವ ಯಾವೊಬ್ಬ ವ್ಯಕ್ತಿಯು ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದನ್ನು ಸಂದಾಯ ಮಾಡಲು ತಪ್ಪಿದಲ್ಲಿ ಅಥವಾ ಎರಡು ಕ್ರಮಾಗತ ಕಂತುಗಳು ಅಥವಾ ಯಾವುದೇ ಮೂರು ಕಂತುಗಳನ್ನು ಸಂದಾಯ ಮಾಡಲು ತಪ್ಪಿದಲ್ಲಿ ಪ್ರಾಧಿಕಾರವು, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ನುಗಳ ಅಧಿನಿಯಮ, 1976 ಅಥವಾ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಮೂಲಕ ತೆರಿಗೆಗಳ ವಸೂಲಿಗಾಗಿ ಉಪಬಂಧ ಕಲ್ಪಿಸಿರುವ ರೀತಿಯಲ್ಲಿ ಬಾಕಿಯಿರುವ ಸಂಪೂರ್ಣ ಮೊಬಲಗನ್ನು ಬಡ್ಡಿ ಸಹಿತವಾಗಿ ಸದರಿ ವ್ಯಕ್ತಿಯಿಂದ ಅಥವಾ ಅಂಥ ಭೂಮಿಯಲ್ಲಿ, ಅವನ, ಹಿತಾಸಕ್ತಿಯನ್ನು ಹೊಂದಿರುವ ಉತ್ತರಾಧಿಕಾರಿಯಿಂದ ವಸೂಲುಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದು ಮತ್ತು ಸದರಿ ಹಣವನ್ನು ಹಾಗೆ ವಸೂಲು ಮಾಡಿಲ್ಲದಿದ್ದರೆ ಹುಮು ತಾವು ಹಾಗೆ ಮಾಡಬೇಕೆಂದಿರುವ ತಮ್ಮ ಉದ್ದೇಶವನ್ನು ಸಾರ್ವಜನಿಕ ನೋಟೀಸನ್ನು ನೀಡಿದ ತರುವಾಯ ಮತ್ತು ಅಂಥ ನೋಟೀಸಿನ ಪ್ರಕಟಣೆಯ ತರುವಾಯ ಒಂದು ತಿಂಗಳಿಗೆ ಕಡಿಮೆಯಿಲ್ಲದಂತೆ, ಸಾರ್ವಜನಿಕ ಹರಾಜಿನ ಮೂಲಕ, ಭೂಮಿಯನ್ನು ಅಥವಾ ಅಂಥ ಭೂಮಿಯಲ್ಲಿನ ಸದರಿ ವ್ಯಕ್ತಿಯ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಅವನ ಉತ್ತರಾಧಿಕಾರಿಯ ಹಿತಾಸಕ್ತಿಯನ್ನು ಮಾರಾಟ ಮಾಡಬಹುದು ಮತ್ತು ಮಾರಾಟದ ಉತ್ಪತ್ತಿಯಿಂದ ಮಾರಾಟದ ವೆಚ್ಚವನ್ನು ಮತ್ತು ಸದರಿ ಹಣವನ್ನು, ಕಳೆದು ಬಾಕಿ ಯಾವುದಾದರು ಇದ್ದರೆ, ಅದನ್ನು ತಪ್ಪಿತಸ್ಥನಿಗೆ ಸಂದಾಯ ಮಾಡತಕ್ಕದ್ದು.

**24. ಮುಂದಿನ ಆರ್ಜನೆಗೆ ಸಂದಾಯ, ಮುಂತಾದವುಗಳು ಪೇಕ್ಷಿತವಾಗಿರುವುದಿಲ್ಲ.-** 21ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಪುರೋಭಿವೃದ್ಧಿ ತೆರಿಗೆ ನೀಡಲು ಬದ್ಧನಾಗಿರುವುದರ ಒಪ್ಪಿಗೆ ಅಥವಾ 22ನೇ ಪ್ರಕರಣದ ಅಡಿಯಲ್ಲಿ ನಿರ್ಧರಣೆಯ ತರುವಾಯ ಸದರಿ ತೆರಿಗೆಯ ಸಂದಾಯವು ಸಂಬಂಧಪಟ್ಟ ಭೂಮಿಯ ತರುವಾಯದ ಆರ್ಜನೆಯನ್ನು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಆರ್ಜನೆಯು ಅವಶ್ಯವಿದ್ದರೆ, ಪ್ರತಿಷೇಧಿಸತಕ್ಕದ್ದಲ್ಲ.

**25. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರದ ಅಧಿಕಾರ.-** (1) ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರವು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ನಗರ ಪ್ರದೇಶದೊಳಗಿರುವ ಯಾವುದೇ ಪ್ರದೇಶದ ಹೆಚ್ಚಿನ ಅಭಿವೃದ್ಧಿಗಾಗಿ ಪ್ರಾಧಿಕಾರವು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರಿಗಣಿಸುವ ಅಂಥ ಕಾಮಗಾರಿಗಳನ್ನು ಕೈಗೊಳ್ಳಬಹುದು:

ಪರಂತು, ಅಂಥ ಪ್ರದೇಶವು ಸ್ಥಳೀಯ ಪ್ರಾಧಿಕಾರದ ಪರಿಮಿತಿಯೊಳಗಿದ್ದರೆ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸತಕ್ಕದ್ದು.

(2) ಅಂಥ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ವಹಿಸಿದ ಅಥವಾ ವಹಿಸಲು ಪ್ರಸ್ತಾವಿಸಲಾದ ವೆಚ್ಚವನ್ನು ಅಥವಾ ಪ್ರಾಧಿಕಾರವು ನಿರ್ಧರಿಸಬಹುದಾದ ಮತ್ತು ಸರ್ಕಾರದಿಂದ ಅನುಮೋದಿತವಾದ ಅದರ ಅಂಥ ಭಾಗವನ್ನು ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಅಂಥ ಕಾಮಗಾರಿಗಳಿಂದ ಪ್ರಯೋಜನ ಪಡೆಯುವ ಸ್ವತ್ತುಗಳ ಮಾಲೀಕರ ಮೇಲೆ ದಾಮಾಷ ಮೇರೆಗೆ ತೆರಿಗೆ ವಿಧಿಸುವ ಮೂಲಕ ವಸೂಲು ಮಾಡಬಹುದು. ಸದರಿ ಮೊತ್ತವನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪ್ರಾಧಿಕಾರಕ್ಕೆ ಬಾಕಿಯಿರುವ ಯಾವುದೇ ಇತರ ಮೊತ್ತದಂತೆ ವಸೂಲು ಮಾಡಬಹುದು.

**26. ವಸೂಲಾದ ಪುರೋಭಿವೃದ್ಧಿ ತೆರಿಗೆಯನ್ನು ಸ್ಥಳೀಯ ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು.-** ಯಾವುದೇ ಭೂಮಿಯ ಮೌಲ್ಯ ಹೆಚ್ಚಾಗಿರುವುದಕ್ಕೆ ಸ್ಥಳೀಯ ಪ್ರಾಧಿಕಾರದ ಶಿಫಾರಸಿನ ಮೇಲೆ ಮಾಡಲಾದ ಅಭಿವೃದ್ಧಿ ಸ್ಕೀಮಿನ ನಿರ್ವಹಣೆಯು ಕಾರಣವಾಗಿದ್ದಲ್ಲಿ ಮತ್ತು ಅಂಥ ಸ್ಕೀಮುಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಿರುವ ನಿಧಿಗಳನ್ನು ಸ್ಥಳೀಯ ಪ್ರಾಧಿಕಾರದ ವಶಕ್ಕೆ ಕೊಟ್ಟಿದ್ದಲ್ಲಿ, ಅಂಥ ಭೂಮಿಯ ಮಾಲೀಕರಿಂದ ಪ್ರಾಧಿಕಾರವು ವಸೂಲು ಮಾಡಿದ ಪುರೋಭಿವೃದ್ಧಿ ತೆರಿಗೆಯನ್ನು ಪ್ರಾಧಿಕಾರವು ಸ್ಥಳೀಯ ಪ್ರಾಧಿಕಾರದ ನಿಧಿಗೆ ಜಮೆ ಮಾಡತಕ್ಕದ್ದು.

**27. ಪ್ರಾಧಿಕಾರವು ಐದು ಷವಗಳೊಳಗಾಗಿ ಸ್ಕೀಮನ್ನು ನಿರ್ವಹಿಸಬೇಕು.-** 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿಯ ಘೋಷಣೆಯನ ್ನ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಐದು

ವರ್ಷಗಳ ಅವಧಿಯೊಳಗೆ ಸ್ಕೀಮನ್ನು ಗಣನೀಯವಾಗಿ ನಿರ್ವಹಿಸಲು ಪ್ರಾಧಿಕಾರವು ವಿಫಲಗೊಂಡಲ್ಲಿ, ಸ್ಕೀಮು ರದ್ದಾಗತಕ್ಕದ್ದು ಮತ್ತು 36ನೇ ಪ್ರಕರಣದ ಉಪಬಂಧಗಳು ಪ್ರವರ್ತನಗೊಳ್ಳತಕ್ಕದ್ದು.

**28. ಪ್ರಾಧಿಕಾರವು ಅಗತ್ಯಪಡಿಸಿದರೆ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಭೂಮಿಯು ಬೀದಿಯ ನಿರ್ಮಾಣದ ಸಲುವಾಗಿ ತಾತ್ಕಾಲಿಕವಾಗಿ ಪ್ರಾಧಿಕಾರದಲ್ಲಿ ನಿಹಿತವಾಗುವುದು.**- ಯಾವುದೇ ಅಭಿವೃದ್ಧಿ ಸ್ಕೀಮಿನ ಅಡಿಯಲ್ಲಿ, ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ, ಅಸ್ತಿತ್ವದಲ್ಲಿರುವ ಸಾರ್ವಜನಿಕ ಬೀದಿ ಅಥವಾ ಇತರ ಭೂಮಿಯ ಸಂಪೂರ್ಣ ಅಥವಾ ಯಾವುದೇ ಭಾಗವು ಪ್ರಾಧಿಕಾರವು ನಿರ್ಮಿಸಬೇಕಾಗಿರುವ, ಬದಲಾಯಿಸಬೇಕಾಗಿರುವ, ಅಗಲ ಮಾಡಬೇಕಾಗಿರುವ, ಎತ್ತರಿಸಬೇಕಾಗಿರುವ, ಪುನರ್ ವ್ಯವಸ್ಥೆಗೊಳಿಸಬೇಕಾಗಿರುವ ಅಥವಾ ಪುನರ್ ನಿರ್ಮಾಣ ಮಾಡಬೇಕಾಗಿರುವ ಬೀದಿಯ ಯಾವುದೇ ಭಾಗದ ನಿವೇಶನದಲ್ಲಿ ಸೇರಿದ್ದರೆ, ಪ್ರಾಧಿಕಾರವು ಅಸ್ತಿತ್ವದಲ್ಲಿರುವ ಅಂಥ ಬೀದಿ ಅಥವಾ ಇತರ ಭೂಮಿಯ (ಇದರಲ್ಲಿ ಇನ್ನು ಮುಂದೆ "ಅಗತ್ಯ ಪಡಿಸಿದ ಭಾಗ" ಎಂದು ಕರೆಯಲಾಗುವ), ಸಂದರ್ಭಾನುಸಾರ, ಪೂರ್ಣಭಾಗ ಅಥವಾ ಒಂದು ಭಾಗವು ಹಿಂದೆ ಹೇಳಿದಂತೆ ವ್ಯವಹರಿಸಲು ಬೀದಿಯ ಭಾಗವಾಗಿ ಅಗತ್ಯವಿದೆಯೆಂದು ಸ್ಥಳೀಯ ಪ್ರಾಧಿಕಾರಕ್ಕೆ ಸೂಚನೆ ನೀಡತಕ್ಕದ್ದು ಮತ್ತು ಅಗತ್ಯಪಡಿಸಿದ ಭಾಗವು ತದನಂತರ 32ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ನುಗಳ ಅಧಿನಿಯಮ, 1976, ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವುದೇ ಚರಂಡಿ ಅಥವಾ ನೀರು ಸರಬರಾಜು ಕೇಂದ್ರಗಳಲ್ಲಿನ ಅಥವಾ ಅವುಗಳ ಮೇಲಿರುವ ಹಕ್ಕುಗಳು ಅಥವಾ ಅಧಿಕಾರಗಳಿಗೆ ಭಾಧಕ ಉಂಟುಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

**29. ಪ್ರಾಧಿಕಾರ ಮತ್ತು ಕಮಿಷನರು, 1977ರ ಕರ್ನಾಟಕ ಅಧಿನಿಯಮ 14 ಮತ್ತು 1964ರ ಕರ್ನಾಟಕ ಅಧಿನಿಯಮ 22ರ ಅಡಿಯಲ್ಲಿ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವುದು.**- (1) ಈ ಅಧಿನಿಯಮವು ಅನ್ವಯಿಸುವ ಯಾವುದೇ ಪ್ರದೇಶ ಅಥವಾ ಅದರ ಭಾಗದಲ್ಲಿ, ಸರ್ಕಾರವು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಮತ್ತು ಅಂಥ ಅವಧಿಯಿಂದ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧಗಳು ಮತ್ತು ಮಾರ್ಪಾಟುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು,-

(i) ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ನುಗಳ ಅಧಿನಿಯಮ, 1976 ಅಥವಾ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಅಡಿಯಲ್ಲಿನ ಮುನಿಸಿಪಲ್ ಕೌನ್ಸಿಲ್ ಅಥವಾ ಕಾರ್ಪೊರೇಷನ್ನು ಅಥವಾ ಅದರ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರಾಧಿಕಾರವು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ii) ಸದರಿ ಅಧಿನಿಯಮಗಳ ಅಡಿಯಲ್ಲಿ ಕಾರ್ಪೊರೇಷನ್ನಿನ ಕಮಿಷನರು ಅಥವಾ ಮುನಿಸಿಪಲ್ ಕಮೀಷನರು ಅಥವಾ ಮುನಿಸಿಪಲ್ ಕೌನ್ಸಿಲಿನ ಮುಖ್ಯ ಅಧಿಕಾರಿಯ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಕಮಿಷನರು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು,

- ಎಂದು ಘೋಷಿಸಬಹುದು:

ಪರಂತು, ಅಂಥ ಪ್ರದೇಶ ಅಥವಾ ಅದರ ಒಂದು ಭಾಗವು ನಗರ ಅಥವಾ ಪಟ್ಟಣದ ಪರಿಮಿತಿಗಳಲ್ಲಿ ಇದ್ದರೆ, ಅಂಥ ಘೋಷಣೆಯನ್ನು ಮಾಡುವುದಕ್ಕೆ ಮುಂಚೆ ಕಾರ್ಪೊರೇಷನ್ ಅಥವಾ ಮುನಿಸಿಪಲ್ ಕೌನ್ಸಿಲ್‌ನೊಂದಿಗೆ ಸಮಾಲೋಚಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ಮಾಡಿದ ಮೇಲೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಕಾರ್ಪೊರೇಷನ್ ಅಥವಾ ಮುನಿಸಿಪಲ್ ಕೌನ್ಸಿಲ್ ಅಥವಾ ಅದರ ಯಾವುದೇ ಸ್ಥಾಯಿ ಸಮಿತಿ ಅಥವಾ ಕಾರ್ಪೊರೇಷನ್ ಕಮಿಷನರು ಅಥವಾ ಮುನಿಸಿಪಲ್ ಕಮಿಷನರು ಅಥವಾ ಮುನಿಸಿಪಲ್ ಕೌನ್ಸಿಲಿನ ಮುಖ್ಯ ಅಧಿಕಾರಿಯು, ಅಂಥ ಘೋಷಣೆಯ ಮೂಲಕ, ಸಂದರ್ಭಾನುಸಾರ, ಪ್ರಾಧಿಕಾರ ಅಥವಾ ಕಮಿಷನರಿಗೆ ಪ್ರದತ್ತವಾದ ಅಥವಾ ವಿಧಿಸಲಾದ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸಲು ಅಥವಾ ನಿರ್ವಹಿಸಲು ಸಕ್ಷಮವಾಗಿರತಕ್ಕದ್ದಲ್ಲ.

(3) ಪ್ರಾಧಿಕಾರ ಅಥವಾ ಕಮಿಷನರು (1)ನೇ ಉಪ-ಪ್ರಕರಣದ ಅಡಿಯಲ್ಲಿ ತಾನು ಅಥವಾ ತಾವು ಚಲಾಯಿಸಬಹುದಾದ ಯಾವುವೇ ಪ್ರಕಾರ್ಯಗಳನ್ನು ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನಿಗೆ ಪ್ರತ್ಯಾಯೋಜಿಸಬಹುದು.

(4) (3)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವುದು ಅಥವಾ ನಿರ್ವಹಿಸುವುದು, ಸಂದರ್ಭಾನುಸಾರ, ಪ್ರಾಧಿಕಾರ ಅಥವಾ ಕಮಿಷನರು ವಿಧಿಸಬಹುದಾದ ಅಂಥ ಪರಿಮಿತಿಗಳು, ಷರತ್ತುಗಳು ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

**30. ಬೀದಿಗಳು ಪೂರ್ಣಗೊಂಡ ಮೇಲೆ ಅವು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಬೇಕು ಮತ್ತು ಅವುಗಳಿಂದ ನಿರ್ವಹಣೆ ಆಗಬೇಕು.**- (1) ಸರ್ಕಾರವು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಪ್ರಾಧಿಕಾರದಿಂದ ನಿರ್ಮಿತವಾದ ಯಾವುದೇ ಬೀದಿಯನ್ನು ಸರ್ಕಾರದಿಂದ ಮಂಜೂರಾದ ಯಾವುದೇ ಸ್ಕೀಮಿನ ಯೋಜನೆಗಳಲ್ಲಿ ಮಾರ್ಪಾಟಾಗಿರುವ ರೀತಿಯಲ್ಲಿ ಯಥೋಚಿತವಾಗಿ ಸಮ ಮಾಡಲಾಗಿದೆ, ನೆಲಗಟ್ಟು ಮಾಡಲಾಗಿದೆ, ಜೆಲ್ಲಿ ಹಾಕಿ ದುರಸ್ತು ಮಾಡಲಾಗಿದೆ, ಚಪ್ಪಡಿ ಹಾಸಲಾಗಿದೆ, ಕಾಲುವೆ ಮಾಡಲಾಗಿದೆ, ಒಳಚರಂಡಿ ಮತ್ತು ಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ ಎಂಬುದನ್ನು ಮತ್ತು ಅದರ ದೀಪ ವ್ಯವಸ್ಥೆಗೆ ಅವಶ್ಯವೆಂದು ಮತ್ತು ಪ್ರಾಧಿಕಾರವು ಒದಗಿಸಬೇಕೆಂದು ಅಭಿಪ್ರಾಯಪಡುವ ಅಂಥ ದೀಪಗಳು, ದೀಪದ ಕಂಬಗಳು ಮತ್ತು ಇತರ ಉಪಕರಣಗಳನ್ನು ಒದಗಿಸಲಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡ ತರುವಾಯ ಅಂಥ ಬೀದಿಯನ್ನು ಸಾರ್ವಜನಿಕ ಬೀದಿಯೆಂದು ಘೋಷಿಸತಕ್ಕದ್ದು ಮತ್ತು ತದನಂತರ ಅಂಥ ಬೀದಿಯು, ಸ್ಥಳೀಯ ಪ್ರಾಧಿಕಾರದಲ್ಲಿ, ಸಂದರ್ಭಾನುಸಾರ, ನಿಹಿತವಾಗತಕ್ಕದ್ದು ಅಥವಾ ಪುನರ್‌ನಿಹಿತವಾಗತಕ್ಕದ್ದು ಮತ್ತು ತದನಂತರ, ಸ್ಥಳೀಯ ಪ್ರಾಧಿಕಾರವು ಅಂಥ ಬೀದಿಯನ್ನು ನಿರ್ವಹಿಸತಕ್ಕದ್ದು, ದುರಸ್ತಿಯಲ್ಲಿಡತಕ್ಕದ್ದು ಮತ್ತು ಅಂಥ ಬೀದಿಯ ದೀಪ ವ್ಯವಸ್ಥೆ ಮತ್ತು ಸ್ವಚ್ಛತೆಯನ್ನು ನೋಡಿಕೊಳ್ಳತಕ್ಕದ್ದು.

(2) ಸರ್ಕಾರದಿಂದ ಮಂಜೂರಾದ ಯಾವುದೇ ಅಭಿವೃದ್ಧಿ ಸ್ಕೀಮಿನ ಭಾಗವಾದ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿನ ನಗರ ಪ್ರದೇಶದ ಯಾವುದೇ ಭಾಗದಲ್ಲಿ ಗಾಳಿ ಬೆಳಕಿನ ವ್ಯವಸ್ಥೆಗಾಗಿ ಕಾಯ್ದಿರಿಸಿದ, ಸರ್ಕಾರದಿಂದ ಅನುಸೂಚಿಸಬಹುದಾದ ಅಂಥ ಉದ್ಯಾನಗಳು ಮತ್ತು ಆಟದ ಮೈದಾನಗಳೂ ಸೇರಿದಂತೆ ಯಾವುದೇ ಖಾಲಿ ಜಾಗವನ್ನು ಪೂರ್ಣಗೊಳಿಸಿದ ತರುವಾಯ, ಸ್ಥಳೀಯ ಪ್ರಾಧಿಕಾರಕ್ಕೆ ಸ್ಥಳೀಯ ಪ್ರಾಧಿಕಾರದ ವೆಚ್ಚದಲ್ಲಿ ಅದನ್ನು ನಿರ್ವಹಿಸುವುದಕ್ಕಾಗಿ ವರ್ಗಾಯಿಸತಕ್ಕದ್ದು ಮತ್ತು ತದನಂತರ ಅದು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

(3) ಈ ಪ್ರಕರಣದ ಯಾವುವೇ ಉಪಬಂಧಗಳ ಸಂಬಂಧದಲ್ಲಿ ಪ್ರಾಧಿಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳ ನಡುವೆ ಉದ್ಭವಿಸುವ ಯಾವುದೇ ವಿವಾದವನ್ನು ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**31. ಕೆಲವು ಸಂದರ್ಭಗಳಲ್ಲಿ ನಿವೇಶನಗಳನ್ನು ಪ್ರಾಧಿಕಾರವು ಮಾರಾಟ ಮಾಡಬಾರದು ಅಥವಾ ಅನ್ಯಥಾ ವಿಲೆ ಮಾಡಬಾರದು.**- ಪ್ರಾಧಿಕಾರವು, 30ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲ ಸುಧಾರಣೆಗಳಿಗೂ, ಅಂದಾಜುಗಳಲ್ಲಿ ಗಣನೀಯವಾಗಿ ಉಪಬಂಧ ಕಲ್ಪಿಸುವವರೆಗೂ, ವ್ಯಕ್ತಿಗಳ ವಾಸಕ್ಕಾಗಿ ಅದರ ಮೇಲೆ ಕಟ್ಟಡಗಳನ್ನು ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಯಾವುವೇ ನಿವೇಶನಗಳನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ.

**32. ಹೊಸ ಬಡಾವಣೆಗಳು ಅಥವಾ ಲೇಔಟ್‌ಗಳ ನಿರ್ಮಾಣ ಮಾಡುವುದು ಅಥವಾ ಹೊಸ ಖಾಸಗಿ ಬೀದಿಗಳ ರಚನೆ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ವಿರುದ್ಧವಾಗಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು, ಪ್ರಾಧಿಕಾರದ ಸ್ಪಷ್ಟ ಲಿಖಿತ ಮಂಜೂರಾತಿ ಇಲ್ಲದೇ ಮತ್ತು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ, ಯಾವುದೇ ಬಡಾವಣೆ ಅಥವಾ ಲೇಔಟನ್ನು ಅವುಗಳಲ್ಲಿ ಕಟ್ಟಡವನ್ನು ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ನಿರ್ಮಿಸತಕ್ಕದ್ದಲ್ಲ ಅಥವಾ ನಿರ್ಮಿಸಲು ಪ್ರಯತ್ನಿಸತಕ್ಕದ್ದಲ್ಲ:

ಪರಂತು, ಯಾವುದೇ ಅಂಥ ಬಡಾವಣೆ ಅಥವಾ ಲೇಔಟು, ಸ್ಥಳೀಯ ಪ್ರಾಧಿಕಾರದ ಸ್ಥಳೀಯ ಪರಿಮಿತಿಗಳಲ್ಲಿ ಇದ್ದಲ್ಲಿ, ಪ್ರಾಧಿಕಾರವು ಸ್ಥಳೀಯ ಪ್ರಾಧಿಕಾರದ ಸಹಮತಿ ಇಲ್ಲದೆ ಅಂಥ ಬಡಾವಣೆ ಅಥವಾ ಲೇಔಟ್‌ನ ನಿರ್ಮಾಣಕ್ಕೆ ಮಂಜೂರಾತಿ ನೀಡತಕ್ಕದ್ದಲ್ಲ: ಮತ್ತು ಪರಂತು, ಸ್ಥಳೀಯ ಪ್ರಾಧಿಕಾರ ಮತ್ತು ಪ್ರಾಧಿಕಾರವು, ಬಡಾವಣೆ ಅಥವಾ

ಲೇಔಟ್‌ನ ನಿರ್ಮಾಣದ ಬಗ್ಗೆ ಅಥವಾ ಅದಕ್ಕೆ ಸಂಬಂಧಪಟ್ಟರತ್ತುಗಳ ಬಗ್ಗೆ ಒಪ್ಪಂದಕ್ಕೆ ಬರದಿದ್ದಲ್ಲಿ, ಅವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದರ ಮೇಲಿನ ತೀರ್ಮಾನವು ಅಂತಿಮವಾಗಿರತಕ್ಕದ್ದು .

(2) ಬಡಾವಣೆ ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಹೊಸದಾಗಿ ಖಾಸಗಿ ಬೀದಿಯನ್ನು ರಚಿಸಲು ಉದ್ದೇಶಿಸುವ ಯಾವೊಬ್ಬ ವ್ಯಕ್ತಿಯು, ನಕ್ಷೆ ಮತ್ತು ಒಳರಚನೆಯೊಂದಿಗೆ ಈ ಮುಂದಿನ ವಿವರಗಳನ್ನು ಸೂಚಿಸುವ ಲಿಖಿತ ಅರ್ಜಿಯನ್ನು ಕಮೀಷನರಿಗೆ ಕಳುಹಿಸಿತಕ್ಕದ್ದು :–

(ಎ) ಬೀದಿಗಳು, ಭೂಮಿಗಳು ಅಥವಾ ಖಾಲಿ ಜಾಗಗಳ ಮೇಲೆ ಪ್ರದೇಶದ ನಿವೇಶನಗಳ ರೂಪಣ;

(ಬಿ) ಬೀದಿಯ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ ;

(ಸಿ) ಬೀದಿಗಳ ಸಾಲು ಮತ್ತು ಕಟ್ಟಡದ ಸಾಲು ಮತ್ತು ಬೀದಿಗಳಿಗೆ ಹೊಂದಿಕೊಂಡಿರುವ ಉದ್ದೇಶಿತ ನಿವೇಶನಗಳು ;

(ಡಿ) ಬೀದಿಗಳನ್ನು ಸಮ ಮಾಡಲು, ನೆಲಗಟ್ಟು ಕಟ್ಟಲು, ಜಲ್ಲಿ ಹಾಕಿ ದುರಸ್ತಿ ಮಾಡಲು, ಚಪ್ಪಡಿ ಹಾಸಲು, ಕಾಲುವೆ ತೋಡಲು, ಚರಂಡಿ ಮತ್ತು ಒಳಚರಂಡಿ ಮಾಡಲು, ಸಂರಕ್ಷಿಸಲು ಮತ್ತು ದೀಪದ ವ್ಯವಸ್ಥೆ ಮಾಡಲು ಮತ್ತು ಸಾಕಷ್ಟು ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಬೇಕಾದ ವ್ಯವಸ್ಥೆ.

(3) ಬೀದಿಗಳ ಮಟ್ಟ ಮತ್ತು ಅಗಲ ಮತ್ತು ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮಗಳ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳು ಮತ್ತು ಉಪ ಕಾನೂನುಗಳು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಬೀದಿಗಳ ಸಂದರ್ಭದಲ್ಲಿಯೂ ಸಹ ಅನ್ವಯವಾಗತಕ್ಕದ್ದು ಮತ್ತು ಆ ಉಪ-ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಎಲ್ಲ ವಿವರಗಳು ಪ್ರಾಧಿಕಾರದ ಅನುಮೋದನೆಗೆ ಒಳಪಡತಕ್ಕದ್ದು.

(4) (2)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ 6 ತಿಂಗಳೊಳಗಾಗಿ ಪ್ರಾಧಿಕಾರವು, ಸರ್ಕಾರವು ಹೊರಡಿಸಿದ ಮಾರ್ಗದರ್ಶನ ಸೂತ್ರಗಳಿಗೆ ಅನುಗುಣವಾಗಿ ಇರುವ ಬಡಾವಣೆ ಅಥವಾ ಲೇಔಟಿನ ನಿರ್ಮಾಣಕ್ಕೆ ಅಥವಾ ತಾನು ಉಚಿತವೆಂದು ಭಾವಿಸಬಹುದಾದ ಷರತ್ತಿನ ಮೇಲೆ ಬೀದಿಯ ರಚನೆಗೆ ಮಂಜೂರಾತಿ ನೀಡತಕ್ಕದ್ದು ಅಥವಾ ನಿರಾಕರಿಸತಕ್ಕದ್ದು ಅಥವಾ ಅದಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ಕೇಳತಕ್ಕದ್ದು.

(5) ಪ್ರಾಧಿಕಾರವು, ಅರ್ಜಿಯನ್ನು ಮಂಜೂರು ಮಾಡುವುದಕ್ಕೆ ಮುಂಚೆ ರಸ್ತೆಗಳು, ಚರಂಡಿಗಳು, ನೀರು ಸರಬರಾಜು ಕೇಂದ್ರಗಳು, ಉದ್ಯಾನಗಳು ಮತ್ತು ಖಾಲಿ ಜಾಗಗಳು, ನಾಗರಿಕ ಸೌಲಭ್ಯ ಪ್ರದೇಶಗಳ ಒಡೆತನವನ್ನು ಪ್ರಾಧಿಕಾರಕ್ಕೆ, ಅದಕ್ಕಾಗಿ ಯಾವುದೇ ಪರಿಹಾರವನ್ನು ಕ್ಲೇಮು ಮಾಡದೇ ಶಾಶ್ವತವಾಗಿ ವರ್ಗಾಯಿಸಲು ಸಹ ಅರ್ಜಿದಾರನು ಒಪ್ಪಿಕೊಳ್ಳಬೇಕೆಂಬ ಷರತ್ತಿನ ಮೇಲೆ ರಸ್ತೆಗಳು, ರಸ್ತೆ ಬದಿಯ ಚರಂಡಿಗಳು, ಅಡಿಗಾಲುವೆಗಳು, ಒಳಚರಂಡಿಗಳು ಮತ್ತು ನೀರು ಸರಬರಾಜು ಮತ್ತು ದೀಪದ ವ್ಯವಸ್ಥೆ ಇವುಗಳನ್ನು ಪೂರೈಸಲು ಅವಶ್ಯವಾದ ಮೊಬಲಗನ್ನು ಮತ್ತು ಪ್ರಾಧಿಕಾರವು ಅಂಥ ಅರ್ಜಿದಾರರನ್ನು ಕೇಳಬಹುದಾದ, ಅಂಥ ಇತರ ಉದ್ದೇಶಗಳಿಗೆ ತಗಲಬಹುದಾದ ವೆಚ್ಚಗಳನ್ನು ಠೇವಣಿ ಇಡುವಂತೆ ಅರ್ಜಿದಾರನನ್ನು ಅಗತ್ಯಪಡಿಸಬಹುದು.

(6) ಅಂಥ ಮಂಜೂರಾತಿಯನ್ನು,-

(i) ಪ್ರಸ್ತಾವಿತ ಬೀದಿಯು, ಬೀದಿ ಸುಧಾರಣೆಯ ಯಾವುದೇ ಸಾಮಾನ್ಯ ಸ್ಕೀಮನ್ನು ಅಥವಾ ಅಭಿವೃದ್ಧಿ ಅಥವಾ ವಿಸ್ತರಣೆಯ ಇತರ ಸ್ಕೀಮುಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಮಾಡಲಾದ ಅಥವಾ ಪ್ರಾಧಿಕಾರದ ಅಭಿಪ್ರಾಯದಲ್ಲಿ ಮಾಡುವ ಸಂಭವವಿರುವ ಯಾವುವೇ ಏರ್ಪಾಟುಗಳೊಂದಿಗೆ ಹೊಂದಾಣಿಕೆಯಾಗದಿದ್ದರೆ ; ಅಥವಾ

(ii) ಪ್ರಸ್ತಾವಿತ ಬೀದಿಯು, (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿನಿಯಮದ ಉಪಬಂಧಗಳು, ನಿಯಮಗಳು ಮತ್ತು ಉಪ- ಕಾನೂನುಗಳಿಗನುಗುಣವಾಗಿಲ್ಲದಿದ್ದರೆ ; ಅಥವಾ

(iii) ಪ್ರಸ್ತಾವಿತ ಬೀದಿಯನ್ನು ಈಗಾಗಲೇ ಇರುವ ಬೀದಿಯೊಂದಿಗೆ ಸಂಪರ್ಕ ಹೊಂದುವಂತೆ ರೂಪಿಸಿಲ್ಲದಿದ್ದರೆ; ಅಥವಾ

(iv) ಪ್ರಾಧಿಕಾರದ ಅಭಿಪ್ರಾಯದಲ್ಲಿ, ಲೇಔಟನ್ನು ಪ್ರಾಧಿಕಾರದ ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿಸಲಾದ ಯಾವುವೇ ವಿಸ್ತರಣಾ ಅಥವಾ ಅಭಿವೃದ್ಧಿ ಯೋಜನೆಗಳಿಗೆ ಹೊಂದಿಸಲಾಗದಿದ್ದರೆ,

– ನಿರಾಕರಿಸತಕ್ಕದ್ದು.

(7) ಯಾವೊಬ್ಬ ವ್ಯಕ್ತಿಯೂ, ಪ್ರಾಧಿಕಾರದ ಮಂಜೂರಾತಿಯಿಲ್ಲದೆ ಅಥವಾ ಅದರಿಂದ ವಿಧಿಸಲಾದ ಷರತ್ತುಗಳಿಗೆ ಅನುಗುಣವಾಗಿ ಅಲ್ಲದೆ ಅನ್ಯಥಾ ಲೇಔಟನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಯಾವುದೇ ಹೊಸ ಖಾಸಗಿ ಬೀದಿಯನ್ನು ರಚಿಸತಕ್ಕದ್ದಲ್ಲ. ಪ್ರಾಧಿಕಾರವು ಅರ್ಜಿದಾರನಿಂದ ಹೆಚ್ಚಿನ ಮಾಹಿತಿಯನ್ನು ಅಗತ್ಯಪಡಿಸಿದರೆ, ಅಂಥ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಪ್ರಾಧಿಕಾರವು ಆದೇಶಗಳನ್ನು ಹೊರಡಿಸುವವರೆಗೆ ಲೇಔಟನ್ನು ನಿರ್ಮಿಸಲು ಅಥವಾ ಬೀದಿಯನ್ನು ರಚಿಸಲು ಅವನು ಯಾವುವೇ ಕ್ರಮಗಳನ್ನು ಕೈಗೊಳ್ಳತಕ್ಕದ್ದಲ್ಲ :

ಪರಂತು, ಹಾಗೆ ಆದೇಶಗಳನ್ನು ಹೊರಡಿಸುವ ಬಗ್ಗೆ, ಯಾವುದೇ ಸಂದರ್ಭದಲ್ಲೂ, ಸದರಿ ಅರ್ಜಿಯೊಂದಿಗೆ ಅಂತಿಮವಾಗಿ ವ್ಯವಹರಿಸಲು ಸಾಧ್ಯವಾಗುವಂತೆ ಮಾಡಲು ಪ್ರಾಧಿಕಾರವು ತಾನು ಅವಶ್ಯವೆಂದು ಪರಿಗಣಿಸುವ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಆರು ತಿಂಗಳಿಗೂ ಹೆಚ್ಚು ವಿಳಂಬ ಮಾಡತಕ್ಕದ್ದಲ್ಲ.

(8) ಪ್ರಾಧಿಕಾರವು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯ ದಿನಾಂಕದಿಂದ ಅಥವಾ (7)ನೇ ಉಪ-ಪ್ರಕರಣದ ಅಡಿಯಲ್ಲಿ ಕೇಳಲಾದ ಎಲ್ಲ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಮಂಜೂರಾತಿಯನ್ನು ನಿರಾಕರಿಸದಿದ್ದರೆ, ಅಂಥ ಮಂಜೂರಾತಿಯನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಬೀದಿಯನ್ನು ರಚಿಸಲು ಮುಂದುವರಿಯಬಹುದು. ಆದರೆ ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಅಥವಾ ಉಪ-ಕಾನೂನುಗಳನ್ನು ಉಲ್ಲಂಘಿಸುವಂತೆ ಮಾಡತಕ್ಕದ್ದಲ್ಲ.

(9) ಯಾವೊಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಿದರೆ ಅಥವಾ ನಿರ್ಮಿಸಲು ಪ್ರಯತ್ನಿಸಿದರೆ ಅಥವಾ ಈ ಪ್ರಕರಣದ ಅಡಿಯಲ್ಲಿನ ಪ್ರಾಧಿಕಾರದ ಆದೇಶಗಳಿಲ್ಲದೆ ಅಥವಾ ಆದೇಶಗಳಿಗನುಗುಣವಾಗಿ ಅಲ್ಲದೆ ಅನ್ಯಥಾ ಯಾವುದೇ ಬೀದಿಯನ್ನು ರಚಿಸಿದರೆ, ದೋಷಸಿದ್ಧಿಯ ತರುವಾಯ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಬದ್ಧನಾಗಿರತಕ್ಕದ್ದು.

**33. ಬಡಾವಣೆ, ಲೇಔಟ್ ಅಥವಾ ಬೀದಿಯನ್ನು ಬದಲಾಯಿಸುವುದು ಅಥವಾ ಕೆಡಹುವುದು.**- ಯಾವೊಬ್ಬ ವ್ಯಕ್ತಿಯು, 32ನೇ ಪ್ರಕರಣದಲ್ಲಿ ಉಲ್ಲಿಖಿತವಾದ ಬಡಾವಣೆ ಅಥವಾ ಲೇಔಟನ್ನು ನಿರ್ಮಿಸಿದರೆ ಅಥವಾ ಯಾವುದೇ ಬೀದಿಯನ್ನು ರಚಿಸಿದರೆ ಅಥವಾ ಸದರಿ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಆದೇಶಗಳಿಲ್ಲದೆ ಅಥವಾ ಅವುಗಳಿಗೆ ಅನುಗುಣವಾಗಿ ಅಲ್ಲದೆ ಅನ್ಯಥಾ ಯಾವುದೇ ಕಟ್ಟಡವನ್ನು ನಿರ್ಮಿಸಿದರೆ, ಅಪರಾಧಿಯು ಈ ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗೆ ಒಳಗಾಗಿರಲಿ ಅಥವಾ ಆಗದಿರಲಿ, ಕಮಿಷನರು, ನೋಟೀಸಿನ ಮೂಲಕ,-

(ಎ) ಅಂಥ ಬಡಾವಣೆ, ಲೇಔಟ್ ಅಥರಾ ಬೀದಿಯನ್ನು, ಕಮಿಷನರಿಗೆ ಸಮಾಧಾನವಾಗುವಂತೆ ಏಕೆ ಬದಲಾವಣೆ ಮಾಡಬಾರದು ಅಥವಾ ಅಂಥ ಬದಲಾವಣೆಯು ಕಾರ್ಯ ಸಾಧ್ಯವಲ್ಲವೆಂದು ಕಮಿಷನರು ಭಾವಿಸಿದರೆ, ಅಂಥ ಬಡಾವಣೆ, ಲೇಔಟ್ ಅಥವಾ ಬೀದಿಯನ್ನು ಏಕೆ ಕೆಡವಬಾರದು ಎಂಬುದಕ್ಕೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ಅಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಅವನಿಂದ ಸಹಿಯಾದ ಲಿಖಿತ ಹೇಳಿಕೆಯ ಮೂಲಕ ಕಾರಣ ತೋರಿಸಿ ಕಮಿಷನರಿಗೆ ಕಳುಹಿಸುವಂತೆ ಅಪರಾಧಿಯನ್ನು ಅಗತ್ಯಪಡಿಸಬಹುದು ; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನದಂದು ಮತ್ತು ಅಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಅಪರಾಧಿಯನ್ನು, ಖುದ್ದಾಗಿ ತಾನೇ ಅಥವಾ ಯಥೋಚಿತವಾಗಿ ಪ್ರಾಧಿಕೃತನಾದ ಏಜೆಂಟನ ಮೂಲಕ ಕಮೀಷನರ ಮುಂದೆ ಹಾಜರಾಗಿ ಮೇಲೆ ಹೇಳಿದಂತೆ ಕಾರಣವನ್ನು ತೋರಿಸಲು ಅಗತ್ಯಪಡಿಸಬಹುದು.

(2) ನೋಟೀಸನ್ನು ಜಾರಿಗೊಳಿಸಲಾಗಿರುವ ಯಾವೊಬ್ಬ ವ್ಯಕ್ತಿಯು, ಅಂಥ ಬಡಾವಣೆ, ಲೇಔಟ್ ಅಥವಾ ಬೀದಿಯನ್ನು ಏಕೆ ಹಾಗೆ ಬದಲಾಯಿಸಬಾರದು ಅಥವಾ ಕೆಡವಬಾರದು ಎಂಬುದಕ್ಕೆ ಕಮಿ ಸಮಾಧಾನವಾಗುವಂತೆ ಕಾರಣ ತೋರಿಸಲು ತಪ್ಪಿದರೆ, **ಕಮಿಷನರು** ಅಂಥ ಬಡಾವಣೆ, ಲೇಔಟ್ ಅಥವಾ ಬೀದಿಯನ್ನು ಬದಲಾಯಿಸಲು ಅಥವಾ ಕೆಡವಲು ನಿರ್ದೇಶನ ನೀಡಿ ಆದೇಶವನ್ನು ಹೊರಡಿಸಬಹುದು.

**34. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ನೀರ್ವಹಿಸಲು ಪ್ರಾಧಿಕಾರದ ಅಧಿಕಾರ.**- (1) ಪ್ರಾಧಿಕಾರವು,-

(ಎ) 32ನೇ ಪ್ರಕರಣದ ಅಡಿಯಲ್ಲಿ ಅನುಮತಿಗಾಗಿ ಅರ್ಜಿ ಸಲ್ಲಿಸಿದ ಯಾವೊಬ್ಬ ವ್ಯಕ್ತಿಯು, ಬಡಾವಣೆ ಅಥವಾ ಲೇಔಟಿನ ನಿರ್ಮಾಣಕ್ಕೆ ಅಥವಾ ಬೀದಿಯನ್ನು ರಚಿಸುವುದಕ್ಕೆ ಸಂಬಂಧಪಟ್ಟ ಕಾಮಗಾರಿಗಳನ್ನು ತಾನೇ ನಿರ್ವಹಿಸಲು ಅವನಿಗೆ ಷ್ಪಪ್ಪ ಅನುಮತಿಯನ್ನು ನೀಡಿದ್ದು ಅದನ್ನು ಹಾಗೆ ನಿರ್ವಹಿಸದಿದ್ದರೆ, ಅಥವಾ

(ಬಿ) ಯಾವುದೇ ಖಾಸಗಿ ರಸ್ತೆಯನ್ನು ಅಥವಾ ಅದರ ಒಂದು ಭಾಗವನ್ನು ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಸಮ ಮಾಡದಿದ್ದರೆ, ನೆಲಗಟ್ಟು ಕಟ್ಟದಿದ್ದರೆ, ಜಲ್ಲಿ ಹಾಕಿ ದುರಸ್ತು ಮಾಡದಿದ್ದರೆ, ಚಪ್ಪಡಿ ಹಾಕದಿದ್ದರೆ, ಕಾಲುವೆ ತೋಡದಿದ್ದರೆ, ಚರಂಡಿ, ಒಳಚರಂಡಿ ವ್ಯವಸ್ಥೆ ಮಾಡದಿದ್ದರೆ, ಸಂರಕ್ಷಿಸದಿದ್ದರೆ ಅಥವಾ ದೀಪ ವ್ಯವಸ್ಥೆ ಮಾಡದಿದ್ದರೆ,

ನೋಟೀಸಿನ ಮೂಲಕ, ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸುವ ವ್ಯಕ್ತಿಯನ್ನು ಅಥವಾ ಅಂಥ ಬೀದಿಯ ಅಥವಾ ಅದರ ಭಾಗದ ಮಾಲೀಕರನ್ನು ಮತ್ತು ಅಂಥ ಬೀದಿ ಅಥವಾ ಭಾಗದ ಮುಂದಿರುವ ಅಥವಾ ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳು ಮತ್ತು ಭೂಮಿಗಳ, ಅದರ ಮೇಲಿರುವ, ಭೂಮಿ ಮತ್ತು ಕಟ್ಟಡಗಳ ಮಾಲೀಕರು ಬೇರೆ ಬೇರೆಯಾಗಿರುವ ಸಂದರ್ಭದಲ್ಲಿ, ಭೂಮಿ ಮತ್ತು ಕಟ್ಟಡಗಳೆರಡರ ಮಾಲೀಕರು ಸೇರಿದಂತೆ, ಮಾಲೀಕರನ್ನು, ತನ್ನ ಅಭಿಪ್ರಾಯದಲ್ಲಿ ಅವಶ್ಯವಾಗಿರಬಹುದಾದ ಯಾವುದೇ ಕಾಮಗಾರಿಯನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಕಾಲದೊಳಗೆ ನೆರವೇರಿಸುವಂತೆ ಅಗತ್ಯ ಪಡಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಾಲದೊಳಗೆ ಯಾವುದೇ ಅಂಥ ಕಾಮಗಾರಿಯನ್ನು ನೆರವೇರಿಸದಿದ್ದರೆ, ಪ್ರಾಧಿಕಾರವು, ತಾನು ಉಚಿತವೆಂದು ಭಾವಿಸಿದರೆ, ತಾನೇ ನಿರ್ವಹಿಸಬಹುದು ಅಥವಾ ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ವಹಿಸಲಾದ ವೆಚ್ಚಗಳನ್ನು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು ಅಥವಾ ಮಾಲೀಕರು, ಪ್ರಾಧಿಕಾರವು ನಿರ್ಧರಿಸಬಹುದಾದ ಅಂಥ ಅನುಪಾತಗಳಲ್ಲಿ ಸಂದಾಯ ಮಾಡತಕ್ಕದ್ದು . ಅಂಥ ವೆಚ್ಚಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಂದ ಅವು ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡಬಹುದು.

## ಅಧ್ಯಾಯ IV
## ಭೂ ಆರ್ಜನೆ

**35. ಒಪ್ಪಂದದ ಮೂಲಕ ಭೂಮಿಯನ್ನು ಆರ್ಜಿಸಲು ಪ್ರಾಧಿಕಾರದ ಅಧಿಕಾರ.**- ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಪ್ರಾಧಿಕಾರವು ನಗರ ಪ್ರದೇಶದೊಳಗೆ ಇರುವ ಯಾವುದೇ ಭೂಮಿ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಮಾಲೀಕನೊಂದಿಗೆ ಅಂಥ ಭೂಮಿಯನ್ನು ಖರೀದಿಸಲು ಒಪ್ಪಂದವನ್ನು ಮಾಡಿಕೊಳ್ಳಬಹುದು.

**36. ಒಪ್ಪಂದದ ಮೂಲಕವಲ್ಲದೆ ಅನ್ಯಥಾ ಭೂ ಆರ್ಜನೆಗೆ ಅನ್ವಯಿಸುವ ಉಪಬಂಧಗಳು.**- (1) ಈ ಅಧಿನಿಯಮದ ಅಡಿಯಲ್ಲಿ ಒಪ್ಪಂದದ ಮೂಲಕವಲ್ಲದೆ ಅನ್ಯಥಾ ನಗರ ಪ್ರದೇಶದೊಳಗಿರುವ ಅಥವಾ ಅದರ ಹೊರಗಿರುವ ಭೂಮಿಯ ಆರ್ಜನೆಯನ್ನು [1][“ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ”][1] ಉಪಬಂಧಗಳ ಮೂಲಕ ಅವು ಅನ್ವಯವಾಗುವಮಟ್ಟಿಗೆ ನಿಯಂತ್ರಿಸತಕ್ಕದ್ದು.

(2) [1][“ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ 95ನೇ ಪ್ರಕರಣದ (2)ನೇ ಉಪ ಪ್ರಕರಣದ”][1] ಉದ್ದೇಶಕ್ಕಾಗಿ, ಪ್ರಾಧಿಕಾರವನ್ನು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(3) [1][“ಭೂ ಆರ್ಜನಾ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳಲ್ಲಿ ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ 23ನೇ ಪ್ರಕರಣದ”][1] ಅಡಿಯಲ್ಲಿ ಭೂಮಿಯು ಸರ್ಕಾರದಲ್ಲಿ ನಿಹಿತವಾದ ತರುವಾಯ, ಡೆಪ್ಯುಟಿ ಕಮಿಷನರು, ಆರ್ಜನೆಯ ವೆಚ್ಚವನ್ನು ಸಂದಾಯ ಮಾಡಿದ ಅನಂತರ ಮತ್ತು ಆರ್ಜನೆಯ ಕಾರಣದಿಂದ ಭರಿಸಬಹುದಾದ ಯಾವುವೇ ಹೆಚ್ಚಿನ ವೆಚ್ಚಗಳನ್ನು ಸಂದಾಯ ಮಾಡಲು ಪ್ರಾಧಿಕಾರವು ಒಪ್ಪಿಕೊಂಡ ಅನಂತರ, ಭೂಮಿಯನ್ನು ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು ಮತ್ತು ತದನಂತರ ಭೂಮಿಯು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

1. 2017ರ ಅಧಿನಿಯಮ ಸಂಖ್ಯೆ 51ರ ಮೂಲಕ ದಿನಾಂಕ: 18.12.2017 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ V

## ಸ್ವತ್ತು ಮತ್ತು ಹಣಕಾಸು

**37. ತನಗೆ ಅಥವಾ ಸ್ಥಳೀಯ ಪ್ರಾಧಿಕಾರಗಳು, ಮುಂತಾದವುಗಳಿಗೆ ಸೇರಿದ ಭೂಮಿಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವ ಸರ್ಕಾರದ ಅಧಿಕಾರ.-** (1) ಸರ್ಕಾರವು ಈ ಅಧಿನಿಯಮದ ಉದ್ದೇಶಕ್ಕಾಗಿ ಮತ್ತು ತಾನು ವಿಧಿಸಬಹುದಾದ ಅಂಥ ಪರಿಮಿತಿಗಳು ಮತ್ತುಷರತ್ತುಗಳು ಹಾಗೂ ಇದರಲ್ಲಿ ಇನ್ನು ಮುಂದೆ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಅಧಿಸೂಚನೆಯ ಮೂಲಕ, ಆಗಿಂದಾಗ್ಗೆ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಭೂಮಿಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸಬಹುದು ಮತ್ತು ಅದರಲ್ಲಿ ನಿಹಿತಗೊಳಿಸಬಹುದು.

(2) ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯವಲ್ಲದೆ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಿಹಿತಗೊಳಿಸಲಾದ ಯಾವುದೇ ಭೂಮಿಯು, ಈ ಅಧಿನಿಯಮದ ಉದ್ದೇಶಕ್ಕಾಗಿ ಪ್ರಾಧಿಕಾರಕ್ಕೆ ಅಗತ್ಯವಿಲ್ಲವೆಂದು ಅಥವಾ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಯಾವುದೇ ಇತರ ಭೂಮಿಯು, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಗತ್ಯವೆಂದು ಸರ್ಕಾರವು ಅಭಿಪ್ರಾಯಪಡುವಾಗಲೆಲ್ಲಾ, ಭೂಮಿಯು, ಸಂದರ್ಭಾನುಸಾರ, ಸರ್ಕಾರ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಅಥವಾ ಅದಕ್ಕೆ ವರ್ಗಾಯಿಸತಕ್ಕದೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸತಕ್ಕದ್ದು.

**38. ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ವರ್ಗಾಯಿಸಲು ಪ್ರಾಧಿಕಾರದ ಅಧಿಕಾರ.-** ನಿಯಮಿಸಬಹುದಾದ ಅಂಥ ನಿರ್ಬಂಧಗಳು,ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು, ಪ್ರಾಧಿಕಾರವು ತನಗೆ ಸೇರಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾಯಿಸಲು ಮತ್ತು ಬಹಿರಂಗ ಸ್ಥಳಗಳನ್ನಾಗಿ ರೂಪಿಸಲು ಅಥವಾ ಕಟ್ಟಡದ ಉದ್ದೇಶಗಳಿಗಾಗಿ ಅಥವಾ ಯಾವುದೇ ಅಭಿವೃದ್ಧಿ ಸ್ಕೀಮಿನ ಉದ್ದೇಶಕ್ಕಾಗಿ ಇತರ ಯಾವುದೇ ರೀತಿಯಲ್ಲಿ ತನ್ನಲ್ಲಿ ನಿಹಿತವಾಗಿರುವ ಅಥವಾ ತಾನು ಆರ್ಜಿಸಿರುವ ಯಾವುದೇ ಭೂಮಿಯನ್ನು ವಿನಿಯೋಗಿಸಲು ಅಥವಾ ಬಳಸಲು ಅಧಿಕಾರವನ್ನು ಹೊಂದಿರತಕ್ಕದ್ದು.

**39. ಉದ್ಯಾನವನಗಳು, ಆಟದ ಮೈದಾನಗಳು ಮತ್ತು ನಾಗರಿಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ಪ್ರದೇಶವನ್ನು ಇತರ ಉದ್ದೇಶಗಳಿಗಾಗಿ ಉಪಯೋಗಿಸಲು ಷೇಧ.-** ಪ್ರಾಧಿಕಾರವು, ಸಾರ್ವಜನಿಕ ಉದ್ಯಾನವನಗಳು ಮತ್ತು ಆಟದ ಮೈದಾನಗಳು ಮತ್ತು ನಾಗರಿಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ಯಾವುದೇ ಪ್ರದೇಶವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಮಾರಾಟ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ ಮತ್ತು ಹಾಗೆ ಮಾಡಲಾದ ಯಾವುದೇ ವಿಲೆಯು ಅಕೃತ ಮತ್ತು ಶೂನ್ಯವಾಗತಕ್ಕದ್ದು.

**40. ಸಾಲ ಪಡೆಯಲು ಪ್ರಾಧಿಕಾರದ ಅಧಿಕಾರ.**- (1) ಪ್ರಾಧಿಕಾರವು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಈ ಬಗ್ಗೆ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಆಗಿಂದಾಗ್ಗೆ, ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲ ಪಡೆಯಬಹುದು.

(2) ಈ ಪ್ರಕರಣದ ಉದ್ದೇಶಕ್ಕಾಗಿ, ಸರ್ಕಾರದಿಂದ ರಚಿಸಲಾದ ನಿಯಮಗಳು. ಡಿಬೆಂಚರುಗಳನ್ನು ನೀಡಿ ಸಾಲ ಪಡೆಯಲು ಮತ್ತು ಬ್ಯಾಂಕರುಗಳೊಂದಿಗೆ ವ್ಯವಸ್ಥೆ ಮಾಡಲು ಪ್ರಾಧಿಕಾರವನ್ನು ಶಕ್ತಗೊಳಿಸಬಹುದು.

(3) ಪ್ರಾಧಿಕಾರವು ನೀಡುವ ಡಿಬೆಂಚರುಗಳು ಸರ್ಕಾರದ ಮಂಜೂರಾತಿಯೊಂದಿಗೆ, ಪ್ರಾಧಿಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ಪ್ರತಿಯೊಂದು ಡಿಬೆಂಚರಿಗೂ, ಕಮಿಷನರು ಹಾಗೂ ಪ್ರಾಧಿಕಾರದ ಒಬ್ಬ ಇತರ ಸದಸ್ಯನ ಸಹಿ ಇರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಪಡೆಯಲಾದ ಸಾಲಗಳ ಹಾಗೂ ನೀಡಲಾದ ಡಿಬೆಂಚರುಗಳ ಬಗ್ಗೆ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಅಸಲಿನ ಮರು ಸಂದಾಯ ಹಾಗೂ ಬಡ್ಡಿಯ ಸಂದಾಯಕ್ಕಾಗಿ ಸರ್ಕಾರವು ಖಾತರಿ ನೀಡಬಹುದು.

**41. ಅಭಿವೃದ್ಧಿ ನಿಧಿ ಹಾಗೂ ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬುಗಳು.**- (1) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಿಹಿತವಾದ ಅಥವಾ ನಿಹಿತಗೊಳಿಸುವ ಅಥವಾ ಅದು ಆರ್ಜಿಸಲಾದ ಎಲ್ಲ ಭೂಮಿಗಳು, ಕಟ್ಟಡಗಳು ಮತ್ತು ಇತರ ಸ್ವತ್ತಿನ ಬಾಡಿಗೆಗಳು, ಲಾಭಗಳು ಮತ್ತು ಮಾರಾಟದ ಉತ್ಪತ್ತಿಗಳನ್ನು "ನಗರಾಭಿವೃದ್ಧಿ ನಿಧಿ" ಎಂದು ಕರೆಯಲಾಗುವ ಒಂದು ನಿಧಿಗೆ ಜಮೆ ಮಾಡತಕ್ಕದ್ದು.

(2) ಸದರಿ ನಿಧಿಗೆ,-

(ಎ) 40ನೇ ಪ್ರಕರಣದ ಅಡಿಯಲ್ಲಿ ಸಾಲಪಡೆಯಲಾದ ಯಾವುವೇ ಮೊಬಲಗುಗಳನ್ನು ;

(ಬಿ) ಈ ಅಧಿನಿಯಮದ ಉದ್ದೇಶಕ್ಕಾಗಿ, ಸರ್ಕಾರವು ಆಗಿಂದಾಗ್ಗೆ ಪ್ರಾಧಿಕಾರದ ವಶಕ್ಕೆ ಕೊಡಬಹುದಾದ ಅಂಥ ಮೊತ್ತಗಳನ್ನು ;

(ಸಿ) ಪ್ರಾಧಿಕಾರ ಕೈಗೊಂಡ ಅಂಥ ಅಭಿವೃದ್ಧಿ ಯೋಜನೆಗಳ ಪರಿಣಾಮದಿಂದಾಗಿ, ಸ್ಥಳೀಯ ಪ್ರಾಧಿಕಾರದ ಸಂಪನ್ಮೂಲಗಳಿಗೆ ಪ್ರಾಪ್ತವಾಗುವ ಅಥವಾ ಪ್ರಾಪ್ತವಾಗುವ ಸಂಭವವಿರುವ ಪರಿಹಾರ ಅಥವಾ ಸೇರ್ಪಡೆಯ ಬಗ್ಗೆ, ಸರ್ಕಾರವು ಪರಿಶೀಲಿಸಿದ ತರುವಾಯ ಆಗಿಂದಾಗ್ಗೆ ಸರ್ಕಾರವು ತರಿಸಿಕೊಳ್ಳಬಹುದಾದ ಸ್ಥಳೀಯ ಪ್ರಾಧಿಕಾರದ ಅಂಥ ಕೊಡುಗೆಗಳನ್ನು ; ಮತ್ತು

(ಡಿ) 26ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪ್ರಾಧಿಕಾರಕ್ಕೆ ಬಾಕಿಯಿರುವ ಮತ್ತು ಅದಕ್ಕೆ ಸಂದಾಯ ಮಾಡಲಾದ ಅಥವಾ ಅದರಿಂದ ವಸೂಲು ಮಾಡಲಾದ ಪುರೋಭಿವೃದ್ಧಿ ತೆರಿಗೆ ಮತ್ತು ಇತರ ಮೊತ್ತಗಳನ್ನು,

- ಸಹ ಜಮೆ ಮಾಡತಕ್ಕದ್ದು ;

**42. ನಗರಾಭಿವೃದ್ಧಿ ನಿಧಿಯ ವಿನಿಯೋಗ.**- (1) ಸದರಿ ನಿಧಿಯನ್ನು ಪ್ರಾಧಿಕಾರವು ನ್ಯಾಸದಲ್ಲಿ ಧಾರಣ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಪೂರಕ ವೆಚ್ಚಗಳನ್ನು ಸಂದಾಯ ಮಾಡುವಲ್ಲಿ, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ವಿನಿಯೋಗಿಸತಕ್ಕದ್ದು.

(2) ಅಂಥ ವೆಚ್ಚಗಳು, ಇತರ ವಿಷಯಗಳೊಂದಿಗೆ,-

(ಎ) ಈ ಅಧಿನಿಯಮದ ಅಡಿಯಲ್ಲಿ, ಪ್ರಾಧಿಕಾರದಲ್ಲಿ ನಿಹಿತವಾದ ಅಥವಾ ನಿಹಿತವಾಗಿರುವ ಅಥವಾ ಅದು ಆರ್ಜಿಸಲಾದ ಸ್ವತ್ತಿನ ಬಾಡಿಗೆಗಳು ಮತ್ತು ಲಾಭಗಳು ಮತ್ತು ಇತರ ಉತ್ಪತ್ತಿಗಳ ಸಂಗ್ರಹಣೆಗಾಗಿ ಒಂದು ಪ್ರತ್ಯೇಕ ಸಿಬ್ಬಂದಿಯ ನಿರ್ವಹಣೆಯ ವೆಚ್ಚ, ಯಾವುದಾದರೂ ಇದ್ದರೆ, ಅದನ್ನು ;

(ಬಿ) ಸ್ವತ್ತುಗಳ ಅಥವಾ ಇತರ ಕಂದಾಯ ಉದ್ದೇಶಗಳ ಮೇಲ್ವಿಚಾರಣೆಗಾಗಿ ಅವಶ್ಯಕವಿರುವ, ಅನುಸೂಚಿತ ಸಿಬ್ಬಂದಿಯ ಭಾಗವಲ್ಲದ, ಚಿಕ್ಕಪುಟ್ಟ ಹಾಗೂ ಇತರ ಸಿಬ್ಬಂದಿಗಳ ವೆಚ್ಚಗಳನ್ನು ;

(ಸಿ) ಅನುಸೂಚಿತ ಸಿಬ್ಬಂದಿಗಳ ವೇತನಗಳು ಹಾಗೂ ಭತ್ಯೆಗಳೂ ಸೇರಿದಂತೆ ವ್ಯವಸ್ಥಾಪನಾ ವೆಚ್ಚ ಮತ್ತು ಎಲ್ಲ ಆನುಷಂಗಿಕ ವೆಚ್ಚಗಳನ್ನು ; ಮತ್ತು

(ಡಿ) ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 ಅಥವಾ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 ಅಥವಾ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983ರ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಿಹಿತವಾದ ಹಾಗೂ ವಿನಾಯಿತಿಗೆ ಒಳಪಡದ ಭೂಮಿಗಳು ಮತ್ತು ಕಟ್ಟಡಗಳ ಮೇಲೆ ವಿಧಿಸಲಾದ ಬಾಡಿಗೆಗಳು ಮತ್ತು ತೆರಿಗೆಗಳ ಸಂಬಂಧದಲ್ಲಿ ಪ್ರಾಧಿಕಾರದಿಂದ ಮಾಡಲಾದ ಎಲ್ಲ ಸಂದಾಯಗಳನ್ನು,

-ಒಳಗೊಳ್ಳತಕ್ಕದ್ದು.

(3) ಸರ್ಕಾರಿ ನೌಕರರಲ್ಲದ ವ್ಯಕ್ತಿಗಳನ್ನು ತಾವೇ ಮನೆಗಳನ್ನು ಅಥವಾ ಇತರ ವಸತಿಯನ್ನು ಒದಗಿಸಿಕೊಳ್ಳಲು ಸಾಧ್ಯವಾಗಿಸುವ ಉದ್ದೇಶಗಳಿಗಾಗಿ ಪ್ರಾಧಿಕಾರವು ಆಗಿಂದಾಗ್ಗೆ ಮತ್ತು ಸರ್ಕಾರವು ಅನುಮೋದಿಸಬೇಕಾದ ರೀತಿಯಲ್ಲಿ ಸದರಿ ನಿಧಿಯಿಂದ ಮುಂಗಡಗಳನ್ನು ಸಹ ನೀಡಬಹುದು.

**43. ಆದಾಯ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು.**- ಕಮೀಷನರು, ಪ್ರತಿವರ್ಷದ ಫೆಬ್ರವರಿಯ ಮೊದಲನೇ ದಿನಾಂಕಕ್ಕಿಂತ ತಡವಾಗಿಯಲ್ಲದೆ ನಡೆಸಬೇಕಾದ ಒಂದು ವಿಶೇಷ ಸಭೆಯಲ್ಲಿ ಮುಂಬರುವ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದಂದು ಪ್ರಾರಂಭವಾಗುವ ವರ್ಷಕ್ಕೆ ಪ್ರಾಧಿಕಾರದ ಆದಾಯ ಮತ್ತು ವೆಚ್ಚವನ್ನು, ಪ್ರಾಧಿಕಾರವು ಆಗಿಂದಾಗ್ಗೆ ನಿರ್ದೇಶನ ನೀಡತಕ್ಕ ಅಂಥ ವಿವರದೊಂದಿಗೆ ಹಾಗೂ ಅಂಥ ರೀತಿಯಲ್ಲಿ ಪ್ರಾಧಿಕಾರದ ಮುಂದೆ ಇಡತಕ್ಕದ್ದು.

(2) ಅಂಥ ಅಂದಾಜು, ಈ ಅಧಿನಿಯಮದ ದಕ್ಷ ನಿರ್ವಹಣೆಗಾಗಿ, ಉಪಬಂಧವನ್ನು ಕಲ್ಪಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು, ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನಿಗೆ, ಅಂದಾಜನ್ನು ಯಾವ ಸಭೆಯ ಮುಂದೆ ಮಂಡಿಸಬೇಕೋ ಆ ಸಭೆಯ ದಿನಾಂಕಕ್ಕಿಂತ ಕಡೇಪಕ್ಷ ಹತ್ತು ಪೂರ್ಣ ದಿನಗಳಿಗೆ ಮುಂಚೆ ಅಂಚೆಯ ಮೂಲಕ ಅಥವಾ ಅನ್ಯಥಾ ಕಳುಹಿಸತಕ್ಕದ್ದು.

**44. ಪ್ರಾಧಿಕಾರವು ಅಂಥ ಅಂದಾಜನ್ನು ಅನುಮೋದಿಸುವುದು ಅಥವಾ ತಿದ್ದುಪಡಿ ಮಾಡುವುದು.**- ಪ್ರಾಧಿಕಾರವು, ತನಗೆ ಒಪ್ಪಿಸಲಾದ ಅಂದಾಜನ್ನು ಪರಿಶೀಲಿಸತಕ್ಕದ್ದು ಮತ್ತು ಅದನ್ನು ಮಾರ್ಪಾಡಿಲ್ಲದೆ ಅಥವಾ ಉಚಿತವೆಂದು ಭಾವಿಸುವ ಅಂಥ ಮಾರ್ಪಾಡಿಗೊಳಪಟ್ಟು ಅನುಮೋದಿಸತಕ್ಕದ್ದು.

**45. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸುವುದು.**- ಪ್ರಾಧಿಕಾರವು ಅನುಮೋದಿಸಿದಂತೆ ಅಂದಾಜನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು. ಸರ್ಕಾರವು ಅಂಥ ಅಂದಾಜನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡಬಹುದು ಅಥವಾ ಅನುಮತಿಸದಿರಬಹುದು ಮತ್ತು ಅದನ್ನು ತಿದ್ದುಪಡಿಗಾಗಿ ಹಿಂದಿರುಗಿಸ ಬಹುದು. ಪ್ರಾಧಿಕಾರವು, ಹಾಗೆ ಹಿಂತಿರುಗಿಸಲಾದ ಅಂದಾಜನ್ನು ಕೂಡಲೇ ತಿದ್ದುಪಡಿ ಮಾಡತಕ್ಕದ್ದು ಮತ್ತು ತಿದ್ದುಪಡಿಯಾದ ಅಂದಾಜನ್ನು ಸರ್ಕಾರಕ್ಕೆ ಪುನಃ ಒಪ್ಪಿಸತಕ್ಕದ್ದು.

**46. ಪೂರಕ ಅಂದಾಜುಗಳನ್ನು ತಯಾರಿಸಿ ಅವಶ್ಯಕವಿದ್ದಾಗ ಒಪ್ಪಿಸುವುದು.**- ಪ್ರಾಧಿಕಾರವು, ಯಾವ ವರ್ಷಕ್ಕಾಗಿ ಯಾವುದೇ ಅಂದಾಜನ್ನು ಮಂಜೂರು ಮಾಡಿದೆಯೋ ಆ ವರ್ಷದ ಅವಧಿಯಲ್ಲಿ, ಯಾವುದೇ ಕಾಲದಲ್ಲಿ ಒಂದು ಪೂರಕ ಅಂದಾಜನ್ನು ತಯಾರಿಸಿ ತನಗೆ ಒಪ್ಪಿಸುವಂತೆ ಮಾಡಬಹುದು. ಅಂಥ ಪ್ರತಿಯೊಂದು ಪೂರಕ ಅಂದಾಜನ್ನು ಪ್ರಾಧಿಕಾರವು ಪರಿಶೀಲಿಸಿ ಅನುಮೋದಿಸತಕ್ಕದ್ದು ಮತ್ತು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**47. ವೆಚ್ಚದ ಸಂಬಂಧದ ಉಪಬಂಧಗಳು.**- ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಯಾವುದೇ ಮೊತ್ತವನ್ನು, ಆ ಮೊತ್ತವು, ಸರ್ಕಾರದಿಂದ ಮಂಜೂರಾದ ಅಂದಾಜಿನಲ್ಲಿ ಅಥವಾ ಪೂರಕ ಅಂದಾಜಿನಲ್ಲಿ ಅಥವಾ ನ್ಯಾಯಾಲಯದ ಒಂದು ಡಿಕ್ರಿ ಅಥವಾ ಐತೀರ್ಪಿನ ಮೇರೆಗೆ ಪ್ರಾಧಿಕಾರವು ಸಂದೇಯ ಮಾಡಬೇಕಾದ ಮೊತ್ತದಲ್ಲಿ ಸೇರಿದ ಹೊರತು ಖರ್ಚು ಮಾಡತಕ್ಕದ್ದಲ್ಲ :

ಪರಂತು, ಯಾವುದೇ ಅನಿರೀಕ್ಷಿತ ಸನ್ನಿವೇಶಗಳ ಸಂದರ್ಭದಲ್ಲಿ, ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಒಂದು ಮೊತ್ತವನ್ನು, ಹಾಗೆ ಸೇರಿರದಿದ್ದರೂ ಸಹ ಖರ್ಚು ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ

ಕಮಿಷನರು, ಯಾವ ಸನ್ನಿವೇಶಗಳಲ್ಲಿ ಖರ್ಚನ್ನು ಭರಿಸಲಾಯಿತೋ ಆ ಸನ್ನಿವೇಶಗಳನ್ನು ಮತ್ತು ಯಾವ ಮೂಲದಿಂದ ಅದನ್ನು ಭರಿಸಲು ಪ್ರಸ್ತಾವಿಸಲಾಗಿದೆಯೋ ಅದನ್ನು ಕೂಡಲೇ ಸರ್ಕಾರಕ್ಕೆ ವರದಿ ಮಾಡತಕ್ಕದ್ದು:

ಮತ್ತು ಪರಂತು, ಅಂಥ ಯಾವುದೇ ಖರ್ಚನ್ನು, 46ನೇ ಪ್ರಕರಣದಲ್ಲಿ ಮಂಡಿಸಲಾದ ರೀತಿಯಲ್ಲಿ ಅನುಮೋದಿಸಿ, ಮಂಜೂರು ಮಾಡಬೇಕಾದ ಒಂದು ಪೂರಕ ಅಂದಾಜಿನಲ್ಲಿ ಸೇರಿಸತಕ್ಕದ್ದು.

**48. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಕಮಿಷನರು ನಿಯಮಿಸಬಹುದಾದ ಅಂಥ ಲೆಕ್ಕಪತ್ರಗಳ ಪ್ರಪತ್ರಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ಇಡುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಲೆಕ್ಕಪತ್ರಗಳ ಒಂದು ವಾರ್ಷಿಕ ವಿವರಣಾ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕ ಪತ್ರಗಳನ್ನು ಸರ್ಕಾರದಿಂದ ನೇಮಕಗೊಂಡ ಒಬ್ಬ ಲೆಕ್ಕ ಪರಿಶೋಧನಾಧಿಕಾರಿಯು, ವರ್ಷಕ್ಕೊಮ್ಮೆ ಲೆಕ್ಕ ಪರಿಶೋಧನೆ ಮಾಡತತಕ್ಕದ್ದು.

(3) ಲೆಕ್ಕ ಪರಿಶೋಧನಾಧಿಕಾರಿಗೆ, ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(4) ಪ್ರಾಧಿಕಾರವು, ಲೆಕ್ಕಪರಿಶೋಧನೆಗಾಗಿ ನಿಯಮಿಸಬಹುದಾದ ಅಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯಮಾಡತಕ್ಕದ್ದು.

(5) ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯಾದ ಷನರುೂಡಲೇ, ಕಮಿ ಲೆಕ್ಕಪರಿಶೋಧನಾಧಿಕಾರಿಯ ವರದಿಯ ಒಂದು ಪ್ರತಿಯೊಂದಿಗೆ, ಲೆಕ್ಕಪರಿಶೋಧನೆಯಾದ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಲೆಕ್ಕ ಪರಿಶೋಧನೆಯಾದ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನಾಧಿಕಾರಿಯ ವರದಿಯನ್ನು ಪ್ರಾಧಿಕಾರವು ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸತಕ್ಕದ್ದು. ಲೆಕ್ಕ ಪರಿಶೋಧನೆಯಾದ ಲೆಕ್ಕಪತ್ರಗಳು ಹಾಗೂ ವರದಿಯನ್ನು, ಸರ್ಕಾರವು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(6) ಸರ್ಕಾರವು ಲೆಕ್ಕ ಪರಿಶೋಧನಾಧಿಕಾರಿಯ ವರದಿಯನ್ನು ಅವಗಾಹನೆ ಮಾಡಿದ ತರುವಾಯ, ಜಾರಿ ಮಾಡಲು ತಾನು ಉಚಿತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ಪ್ರಾಧಿಕಾರ ಹಾಷನರುಕಮಿ ಪಾಲಿಸತಕ್ಕದ್ದು.

**49. ವರದಿಗಳು.–** ಪ್ರಾಧಿಕಾರವು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮುಂಚೆ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಮಧ್ಯಂತರಗಳಲ್ಲಿ, ನಿಯಮಿಸಬಹುದಾದ ಅಂಷಯಥಿಗಳ ಮೇಲೆ ವರದಿಯನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು. ಅಂಥ ಪ್ರತಿಯೊಂದು ವರದಿಯನ್ನು, ಸರ್ಕಾರವು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**50. ದಸ್ತಾವೇಜುಗಳನ್ನು ಹಾಜರುಪಡಿಸಲು ಹಾಗೂ ಸಂಬಂಧಪಟ್ಟ ವ್ಯಕ್ತಿಗಳ ಹಾಜರಾತಿಯನ್ನು ಆಗತ್ಯಪಡಿಸಲು ಲೆಕ್ಕ ಪರಿಶೋಧನಾಧಿಕಾರಿಯ ಅಧಿಕಾರ.–** (1) ಲೆಕ್ಕ ಪರಿಶೋಧನಾಧಿಕಾರಿಯು,–

(ಎ) ಲೆಕ್ಕ ಪತ್ರಗಳಿಗೆ ಸಂಬಂಧಿಸಿದ, ತಾನು ಉಚಿತವೆಂದು ಭಾವಿಸುವ ಅಂಥ ವೋಚರುಗಳು, ವಿತರಣಾ ಪತ್ರಗಳು, ವರದಿಗಳು, ಪತ್ರ ವ್ಯವಹಾರ, ಟಿಪ್ಪಣಿಗಳು ಅಥವಾ ಇತರ ದಾಸ್ತವೇಜುಗಳನ್ನು ಲಿಖಿತದಲ್ಲಿ ಹಾಜರುಪಡಿಸಲು ಅಗತ್ಯಪಡಿಸಬಹುದು ;

(ಬಿ) ಅಂಥ ವೋಚರುಗಳು, ವಿವರಣಾ ಪತ್ರಗಳು, ವರದಿಗಳು, ಪತ್ರ ವ್ಯವಹಾರ, ಟಿಪ್ಪಣಿಗಳು ಅಥವಾ ಇತರ ದಾಸ್ತವೇಜುಗಳು ಅಥವಾ ಪ್ರಾಧಿಕಾರದ ಯಾವುದೇ ಸ್ವತ್ತಿಗೆ ಜವಾಬ್ದಾರನಾಗಬೇಕಾದ ಅಥವಾ ಅದರ ಅಭಿರಕ್ಷೆ ಅಥವಾ ನಿಯಂತ್ರಣವನ್ನು ಹೊಂದಿರುವ, ವೇತನ ಪಡೆಯವ ಯಾವೊಬ್ಬ ನೌಕರನನ್ನು ಅಥವಾ ತಾನೇ ಸ್ವತಃ ಅಥವಾ ತನ್ನ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಪ್ರಾಧಿಕಾರದೊಂದಿಗೆ ಅಥವಾ ಅದರ ಅಡಿಯಲ್ಲಿನ ಯಾವುದೇ ಕರಾರಿನಲ್ಲಿ ಯಾವುದಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಪ್ರಾಧಿಕಾರದ ಕಛೇರಿಯಲ್ಲಿ ತನ್ನ ಮಂದೆ ಖುದ್ದಾಗಿ ಹಾಜರಾಗಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಆಗತ್ಯಪಡಿಸಬಹುದು ;

(ಸಿ) ಅಧ್ಯಕ್ಷರು ಅಥವಾ ಯಾವೊಬ್ಬ ಅಧಿಕಾರಿ ಅಥವಾ ಸದಸ್ಯರಿಂದ ಯಾವುದೇ ನಿದಿಷ್ಟ ಆಂಶದ ಮೇಲೆ ಲಿಖಿತ ಸ್ಪಷ್ಟೀಕರಣದ ಅಗತ್ಯವಿರುವ ಪ್ರಸಂಗದಲ್ಲಿ ಅಂಥ ವ್ಯಕ್ತಿಯನ್ನು ಅಂಥ ಅಂಶದ ಮೇಲೆ ಸ್ಪಷ್ಟೀಕರಣವನ್ನು ಒದಗಿಸಲು ಆಗತ್ಯಪಡಿಸಬಹುದು.

(2) ಲೆಕ್ಕ ಪರಿಶೋಧನಾಧಿಕಾರಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಕೋರಿಕೆಯಲ್ಲಿ, ಮೂರು ದಿನಗಳಿಗೆ ಕಡಿಮೆಯಿಲ್ಲದ ಒಂದು ಸೂಕ್ತ ಅವಧಿಯೊಳಗೆ ಸದರಿ ಕೋರಿಕೆಯನ್ನು ಪಾಲಿಸತಕ್ಕದ್ದೆಂದು ನಿರ್ದಿಷ್ಟಪಡಿಸಬಹುದು.

(3) ಲೆಕ್ಕ ಪರಿಶೋಧನಾಧಿಕಾರಿಯು, ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಲು ತಾನು ಉದ್ದೇಶಿಸಿರುವ ದಿನಾಂಕದ ಬಗ್ಗೆ ಪ್ರಾಧಿಕಾರಕ್ಕೆ ಎರಡು ವಾರಗಳಿಗೆ ಕಡಿಮೆಯಿಲ್ಲದಂತೆ ಲಿಖಿತ ಮೂಲಕ ನೋಟೀಸನ್ನು ನೀಡತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಲೆಕ್ಕ ಪರಿಶೋಧನಾಧಿಕಾರಿಯು, ಲಿಖಿತದಲ್ಲಿ ಅಭಿಲೇಖಿಸತಕ್ಕ ವಿಶೇಷ ಕಾರಣಗಳಿಗಾಗಿ ಎರಡು ವಾರಗಳಿಗಿಂತ ಕಡಿಮೆ ಅವಧಿಯ ನೋಟೀಸನ್ನು ನೀಡಬಹುದು ಅಥವಾ ಸರ್ಕಾರದಿಂದ ಹಾಗೆ ನಿರ್ದೇಶಿತನಾಗಿದ್ದಲ್ಲಿ, ನೋಟೀಸು ನೀಡದೆ ಒಂದು ವಿಶೇಷ ಅಥವಾ ವಿಸ್ತೃತ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಬಹುದು.

## ಅಧ್ಯಾಯ VI

## ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು

**51. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾದ ಅಧಿಕಾರಿಗಳು ಮತ್ತು ನೌಕರರ ಪಟ್ಟಿ.-** ಪ್ರಾಧಿಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನಿರ್ವಹಿಸಲು ಸೂಕ್ತವೆಂದು ಮತ್ತು ಅವಶ್ಯಕವೆಂದು ತಾನು ಭಾವಿಸತಕ್ಕ ಅಧಿಕಾರಿಗಳ ಮತ್ತು ನೌಕರರ ಸಿಬ್ಬಂದಿಯ ಒಂದು ಪಟ್ಟಿಯನ್ನು ಆಗಿಂದಾಗ್ಗೆ ತಯಾರಿಸಿ, ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸತಕ್ಕದ್ದು; ಅಂಥ ಅಧಿಕಾರಿ ಅಥವಾ ನೌಕರರಿಗಾಗಿ ಪ್ರಾಧಿಕಾರವು ಪ್ರಸ್ತಾವಿಸುವ ವೇತನಗಳು, ಶುಲ್ಕಗಳು ಮತ್ತು ಭತ್ಯಗಳ ಮೊಬಲಗು ಮತ್ತು ಸ್ವರೂಪವನ್ನು ವಿವರಿಸತಕ್ಕದ್ದು. ಸರ್ಕಾರದ ಮಂಜೂರಾತಿಯಿಲ್ಲದೆ ಮಂಜೂರಾದ ಪಟ್ಟಿಯಲ್ಲಿ ಯಾವುದೇ ಮಾರ್ಪಾಟನ್ನು ಮಾಡತಕ್ಕದ್ದಲ್ಲ.

**52. ನೇಮಕಾತಿ ಮುಂತಾದವುಗಳನ್ನು ಯಾರು ಮಾಡಬೇಕು.-** (1) 72ನೇ ಪ್ರಕರಣದ ಅಡಿಯಲ್ಲಿ ರೂಪಿಸಲಾದ ವಿನಿಮಯಗಳ ಉಪಬಂಧಗಳು ಮತು 51ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ಮಂಜೂರಾದ, ತತ್ಕಾಲದಲ್ಲಿ ಜಾರಿಯಲ್ಲಿರುವ ಪಟ್ಟಿಗೊಳಪಟ್ಟು, ಮಾಸಿಕ ವೇತನವು ಒಂದು ಸಾವಿರದ ಐದು ನೂರಕ್ಕೆ ಮೀರದ ಅಧಿಕಾರಿಗಳ ಸಂದರ್ಭದಲ್ಲಿ, ಪ್ರಾಧಿಕಾರದ ಅಧಿಕಾರಿಗಳು ಹಾಗೂ ನೌಕರರನ್ನು (ಸರ್ಕಾರಿ ಸೇವೆಯಲ್ಲಿದ್ದು, ಪ್ರಾಧಿಕಾರಕ್ಕೆ ಎರವಲು ನೀಡಲಾದ ಅಧಿಕಾರಿಗಳಲ್ಲದ) ನೇಮಿಸುವ, ಬಡ್ತಿ ನೀಡುವ, ಅಮಾನತ್ತಿನಲ್ಲಿಡುವ, ವಜಾ ಮಾಡುವ, ಜುಲ್ಮಾನೆ ವಿಧಿಸುವ, ರಜಾವನ್ನು ಕಡಿಮೆಗೊಳಿಸುವ ಅಥವಾ ಮಂಜೂರು ಮಾಡುವ ಅಧಿಕಾರವನ್ನು ಕಮಿಷನರು ಹಾಗೂ ಪ್ರತಿಯೊಂದು ಇತರ ಸಂದರ್ಭದಲ್ಲಿ ಪ್ರಾಧಿಕಾರವು ಚಲಾಯಿಸತಕ್ಕದ್ದು:

ಪರಂತು, ಪ್ರಾಧಿಕಾರಕ್ಕೆ ಎರವಲು ನೀಡಲಾದ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳ ಸಂದರ್ಭದಲ್ಲಿ, ಬಡ್ತಿಗಳನ್ನು ಮಂಜೂರು ಮಾಡುವ ಅಥವಾ ತಡೆಹಿಡಿಯುವ, ಜುಲ್ಮಾನೆ ವಿಧಿಸುವ ಅಥವಾ ಅಮಾನತ್ತಿನಲ್ಲಿಡುವ ಅಧಿಕಾರಗಳನ್ನು ಕಮಿಷನರು ಚಲಾಯಿಸಬಹುದು ಮತ್ತು ಅಂಥ ಅಧಿಕಾರಿಯು ಯಾವ ಇಲಾಖೆಗೆ ಸೇರಿರುವನೋ, ಸರ್ಕಾರದ ಆ ಇಲಾಖೆಯ ಮುಖ್ಯಸ್ಥರಿಗೆ ವಿಷಯವನ್ನು ವರದಿ ಮಾಡತಕ್ಕದ್ದು.

(2) ಅಂಥ ಅಧಿಕಾರಿ ಅಥವಾ ನೌಕರನ ಸ್ವತ: ದುರ್ವರ್ತನೆಯ ಕಾರಣದಿಂದಾಗಿಯಲ್ಲದೇ ಅನ್ಯಥಾ, ಪ್ರಾಧಿಕಾರಕ್ಕೆ ಎರವಲು ನೀಡಿರುವ ಸರ್ಕಾರಿ ಸೇವೆಯಲ್ಲಿರುವ ಒಬ್ಬ ಅಧಿಕಾರಿಯಲ್ಲದೆ, ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ಸೇವೆಯನ್ನು ಬಿಟ್ಟುಕೊಡುವ ಅಥವಾ ಯಾವೊಬ್ಬ ಅಂಥ ಅಧಿಕಾರಿ ಅಥವಾ ನೌಕರನನ್ನು ವಿಶ್ರಾಂತಿವೇತನ, ಉಪದಾನ ಅಥವಾ ಅನುಕಂಪ ಭತ್ಯದ ಮೇಲೆ ನಿವೃತ್ತಿ ಹೊಂದಲು ಅನುಮತಿ ನೀಡುವ ಅಧಿಕಾರವನ್ನು (1)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರವು ಮಾತ್ರ ಚಲಾಯಿಸತಕ್ಕದ್ದು .

# ಅಧ್ಯಾಯ VII

## ಸಂಕೀರ್ಣ

**53. ಪ್ರವೇಶಾಧಿಕಾರಗಳು.-** ಪ್ರಾಧಿಕಾರವು ಯಾವೊಬ್ಬ ವ್ಯಕ್ತಿಗೆ ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೇ ಯಾವುದೇ ಭೂಮಿಯೊಳಗೆ ಅಥವಾ ಅದರ ಮೇಲೆ,-

(ಎ) ಯಾವುದೇ ತನಿಖೆ, ಪರೀಕ್ಷೆ, ಅಳತೆ ಅಥವಾ ಮೋಜಣಿ ನಡೆಸಲು ಅಥವಾ ಅಂಥ ಭೂಮಿ ಅಥವಾ ಕಟ್ಟಡದ ಮಟ್ಟವನ್ನು ತೆಗೆದುಕೊಳ್ಳುವ ;

(ಬಿ) ನಿರ್ಮಾಣದ ಹಂತದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸಲು ಮತ್ತು ಒಳಚರಂಡಿಗಳು ಹಾಗೂ ಮೋರಿಗಳ ಮಾರ್ಗವನ್ನು ಖಚಿತಪಡಿಸಿಕೊಳ್ಳುವ ;

(ಸಿ) ಒಳಮಣ್ಣಿನೊಳಗೆ ಆಗೆಯುವ ಅಥವಾ ಕೊರೆಯುವ;

(ಡಿ) ಗಡಿಗಳನ್ನು ಮತ್ತು ಕೆಲಸದ ಉದ್ದೇಶಿತ ರೇಖೆಗಳನ್ನು ನಿರೂಪಿಸುವ ;

(ಇ) ಗುರುತುಗಳನ್ನು ಇಟ್ಟು ಮತ್ತು ಸುರಂಗಗಳನ್ನು ತೋಡಿ ಅಂಥ ಸಮತಟ್ಟುಗಳು, ಗಡಿಗಳು ಮತ್ತು ರೇಖೆಗಳನ್ನು ಮಾಡುವ ;

(ಎಫ್) ಯಾವುವೇ ಯೋಜನೆಗಳನ್ನು ಉಲ್ಲಂಘಿಸಿ ಅಥವಾ ಷರತ್ತುಗಳಿಗೊಳಪಟ್ಟು ಅಂಥ ಅನುಮತಿಯನ್ನು ನೀಡಲಾಯಿತೋ ಅವನ್ನು ಉಲ್ಲಂಘಿಸಿ ಯಾವುದೇ ಭೂಮಿಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆಯೇ ಅಥವಾ ಅಭಿವೃದ್ಧಿಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ; ಅಥವಾ

(ಜಿ) ಈ ಅಧಿನಿಯಮದ ದಕ್ಷ ನಿರ್ವಹಣೆಗೆ ಇತರ ಯಾವುದೇ ಅವಶ್ಯಕ ಕೆಲಸವನ್ನು ಮಾಡುವ,

- ಉದ್ದೇಶಗಳಿಗಾಗಿ ಪ್ರವೇಶಿಸಲು ಪ್ರಾಧಿಕಾರ ನೀಡಬಹುದು:

ಪರಂತು,-

(i) ಅಂಥ ಯಾವುದೇ ಪ್ರವೇಶವನ್ನು, ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವಿನ ಅವಧಿಯಲ್ಲಿ ಮತ್ತು ಅಧಿಭೋಗದಾರನಿಗೆ ಅಥವಾ ಅದಿಭೋಗದಾರನಿಲ್ಲದಿದ್ದರೆ ಭೂಮಿ ಅಥವಾ ಕಟ್ಟಡದ ಮಾಲಿಕನಿಗೆ ಯುಕ್ತ ನೋಟೀಸನ್ನು ನೀಡದೆ ಮಾಡತಕ್ಕದ್ದಲ್ಲ ;

(ii) ಮಹಿಳೆಯರು ಯಾರಾದರೂ ಇದ್ದರೆ, ಅವರಿಗೆ ಅಂಥ ಭೂಮಿ ಅಥವಾ ಕಟ್ಟಡದಿಂದ ಹೊರ ಹೋಗಲು ಪ್ರತಿಯೊಂದು ಸಂದರ್ಭದಲ್ಲೂ ಸಾಕಷ್ಟು ಅವಕಾಶವನ್ನು ನೀಡತಕ್ಕದ್ದು ;

(iii) ಯಾವ ಉದ್ದೇಶಕ್ಕಾಗಿ ಪ್ರವೇಶವನ್ನು ಮಾಡಲಾಯಿತೋ, ಆ ಉದ್ದೇಶದ ಅತ್ಯವಶ್ಯಕತೆಯೊಂದಿಗೆ ಕಾರ್ಯಸಾಧ್ಯವಾದಷ್ಟೂ ಮಟ್ಟಿಗೆ ಸಂಗತವಾಗುವಂತೆ ಪ್ರವೇಶಿಸಲಾದ ಭೂಮಿ ಅಥವಾ ಕಟ್ಟಡದ ಅಧಿಭೋಗದಾರರ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ಸೂಕ್ತ ಗೌರವವನ್ನು ಯಾವಾಗಲೂ ಸಲ್ಲಿಸತಕ್ಕದ್ದು.

**54. ಪ್ರಾಧಿಕಾರದಿಂದ ನಿರ್ದೇಶನ.-** (1) ಪ್ರಾಧಿಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ನಗರ ಪ್ರದೇಶದಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಇರುವ ಅಂಥ ಇತರ ನಿಕಾಯಗಳಿಗೆ ನಿರ್ದೇಶನಗಳನ್ನು ನೀಡಬಹುದು ಮತ್ತು ಅವುಗಳನ್ನು ಪಾಲಿಸಲು ನಿಧಿಗಳನ್ನು ಒದಗಿಸಬಹುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಯಾವ ನಿಕಾಯಕ್ಕಾಗಿ ನಿರ್ದೇಶನಗಳನ್ನು ನೀಡಲಾಗಿದೆಯೋ, ಆ ನಿಕಾಯವು ಅಂಥ ಪ್ರತಿಯೊಂದು ನಿರ್ದೇಶನಗಳನ್ನು ಪಾಲಿಸತಕ್ಕದ್ದು. ತಪ್ಪಿದಲ್ಲಿ, ಪ್ರಾಧಿಕಾರವು ಈ ಸಂಬಂಧವಾಗಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಮತ್ತು ಸಂಬಂಧಪಟ್ಟ ನಿಕಾಯದಿಂದ ಅದಕ್ಕಾಗಿ ಭರಿಸಲಾದ ವೆಚ್ಚಗಳು, ಯಾವುವಾದರೂ ಇದ್ದರೆ, ಅವುಗಳನ್ನು ವಸೂಲು ಮಾಡಲು ಸಕ್ಷಮವಾಗಿರತಕ್ಕದ್ದು .

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮಂಡಲಿಗಳು ಅಥವಾ ಇತರ ನಿಕಾಯಗಳು ಮತ್ತು ಪ್ರಾಧಿಕಾರದ ನಡುವೆ ತಮಗೆ ನೀಡಲಾದ ನಿರ್ದೇಶಗಳ ಸಂಬಂಧದಲ್ಲಿ ಯಾವುದೇ ವಿವಾದವು ಉದ್ಭವಿಸಿದಲ್ಲಿ, ಅವುಗಳನ್ನು ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**55. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಅಪರಾಧವು ಘಟಿಸಿದ ಕಾಲದಲ್ಲಿ ಕಂಪನಿಯ ವ್ಯವಹಾರಗಳ ನಿರ್ವಹಣೆಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು, ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಬದ್ದನಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ, ತನ್ನ ತಿಳಿವಳಿಕೆಗೆ ಬಾರದೆ ಘಟಿಸಿತೆಂದು ಅಥವಾ ಅಂಥ ಅಪರಾಧವು ಘಟಿಸುವುದನ್ನು ತಪ್ಪಿಸಲು ತಾನು ಎಲ್ಲ ಯೋಗ್ಯ ಶ್ರದ್ಧೆಯನ್ನು ವಹಿಸಿದ್ದನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿದ್ದಲ್ಲಿ ಮತ್ತು ಅದು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಘಟಿಸಿತೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧದ ವ್ಯವಹರಣೆಗೆ ಅವರು ಬದ್ಧರಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) 'ಕಂಪನಿ' ಎಂದರೆ ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ 'ನಿರ್ದೇಶಕ' ಎಂದರೆ ಫರ್ಮಿನ ಒಬ್ಬ ಪಾಲುದಾರ.

**56. ಜುಲ್ಮಾನೆಯನ್ನು ವಸೂಲು ಮಾಡಿದಾಗ, ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು.-** ಈ ಅಧಿನಿಯಮದ ಅಡಿಯಲ್ಲಿನ ಅಭಿಯೋಜನೆಗಳ ಸಂಬಂಧದಲ್ಲಿ ವಸೂಲು ಮಾಡಲಾದ ಎಲ್ಲ ಜುಲ್ಮಾನೆಗಳನ್ನು ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡತಕ್ಕದ್ದು.

**57. ಅಪರಾಧಗಳ ಬಗ್ಗೆ ರಾಜಿ.-** (1) ಪ್ರಾಧಿಕಾರ ಅಥವಾ ಪ್ರಾಧಿಕಾರದಿಂದ ಸಾಮಾನ್ಯ ಅಥವಾ ವಿಶೇ ಆದೇಶದ ಮೂಲಕ ಪ್ರಾಧಿಕೃತನಾದ ಯಾವೊಬ್ಬ ವ್ಯಕ್ತಿಯು, ವ್ಯವಹರಣೆಗಳನ್ನು ಹೂಡುವ ಮೊದಲಾಗಲಿ ಅಥವಾ ತರುವಾಯವಾಗಲಿ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು.

(2) ಒಂದು ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಲ್ಲಿ, ಅಪರಾಧಿಯನ್ನು ಖುಲಾಸೆ ಮಾಡತಕ್ಕದ್ದು ಮತ್ತು ರಾಜಿ ಮಾಡಿಕೊಳ್ಳಲಾದ ಅಪರಾಧದ ಸಂಬಂಧದಲ್ಲಿ, ಅವನ ವಿರುದ್ಧ ಯಾವುವೇ ಮುಂದಿನ ವ್ಯವಹಾರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**58. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು.-** ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯ ಮತ್ತು ಪ್ರತಿಯೊಬ್ಬ ಅಧಿಕಾರಿ ಮತ್ತು ಇತರ ನೌಕರರನ್ನು, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು .

**59. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.-** ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ನಡೆಸತಕ್ಕದ್ದಲ್ಲ.

**60. ಅಭಿಯೋಜನೆಯ ಮಂಜೂರಾತಿ.–** ಪ್ರಾಧಿಕಾರದ ಪೂರ್ವ ಮಂಜೂರಾತಿಯ ಹೊರತು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಸಲುವಾಗಿ, ಅಭಿಯೋಜನೆ ಹೂಡತಕ್ಕದ್ದಲ್ಲ.

**61. ಸದಾ ್ಭವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕೃತ್ಯಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

**62. ಪ್ರತ್ಯಾಯೋಜಿಸಲು ಅಧಿಕಾರ.–** ಪ್ರಾಧಿಕಾರವು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಪ್ರಾಧಿಕಾರದ ಕಮಿಷನರು ಅಥವಾ ಪೂರ್ಣಾವಧಿ ಸದಸ್ಯ ಅಥವಾ ಅಧಿಕಾರಿಯು ಸಹ ಅದರಲ್ಲಿ ನಿದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**63. ಪುನರೀಕ್ಷಣೆ.–** ಸರ್ಕಾರವು ಯಾವುದೇ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯತೆಯ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಪ್ರಾಧಿಕಾರದ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ತಾನು ಉಚಿತವೆಂದು ಭಾವಿಸುವ ಅಂಥ ಆದೇಶವನ್ನು ಹೊರಡಿಸಬಹುದು.

(2) ಪ್ರಾಧಿಕಾರವು, ಯಾವುದೇ ಆದೇಶ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆ, ಔಚಿತ್ಯತೆಯ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತನ್ನ ಅಧೀನದಲ್ಲಿರುವ ಯಾವೊಬ್ಬ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಆದೇಶವನ್ನು ಹೊರಡಿಸಬಹುದು.

(3) ಮನವಿ ಮಾಡಿಕೊಳ್ಳಲು ಯಾವೊಬ್ಬ ವ್ಯಕ್ತಿಗೆ ಒಂದು ಅವಕಾಶವನ್ನು ನೀಡಿದ ಹೊರತು, (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಅವನಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**64. ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು.–** ಪ್ರಾಧಿಕಾರ ಅಥವಾ ಪ್ರಾಧಿಕಾರದ ಯಾವೊಬ್ಬ ಸದಸ್ಯ ಅಥವಾ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ಧ ಅಥವಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿ, ಪ್ರಾಧಿಕಾರದ ಸದಸ್ಯ ಅಥವಾ ಅಧಿಕಾರಿಯ ವಿರುದ್ಧ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮ, ವಿನಿಯಮ ಅಥವಾ ಉಪ-ಕಾನೂನಿನ ಅನುಸರಣೆಯಲ್ಲಿ ಮಾಡಲಾದ ಯಾವುದೇ ಕೃತ್ಯಕ್ಕಾಗಿ ಅಥವಾ ಮಾಡಬೇಕೆಂದು ಉದ್ದೇಶಿಸಲಾದ ಯಾವುದೇ ಕೃತ್ಯಕ್ಕಾಗಿ ಉದ್ದೇಶಿತ ದಾವೆ ಅಥವಾ ಇತರ ವ್ಯವಹರಣೆಗಳು ಅದರ ಕಾರಣದ ಬಗ್ಗೆ ಪ್ರಾಧಿಕಾರಕ್ಕೆ ಒಂದು ತಿಂಗಳ ಮೊದಲು ಲಿಖಿತದಲ್ಲಿ ನೋಟೀಸು ನೀಡದೆ ಅಥವಾ ಅಂಥ ದಾವೆ ಅಥವಾ ಇತರ ವ್ಯವಹರಣೆಗಳ 6 ತಿಂಗಳ ತರುವಾಯ ಅಥವಾ ಸಾಕಷ್ಟು ಪರಿಹಾರ ನೀಡಿದ ತರುವಾಯ, ಯಾವುದೇ ದಾವೆ ಅಥವಾ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ.

**65. ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.–** ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾದುದೆಂದು ತಾನು ಅಭಿಪ್ರಾಯಪಡುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**66. ನೌಕರರ ವರ್ಗಾವಣೆ.–** (1) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು, ಒಂದು ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರರನ್ನು ಇತರ ಯಾವುದೇ ಪ್ರಾಧಿಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸೇವೆಗೆ ವರ್ಗಾವಣೆ ಮಾಡಬಹುದು.

(2) ಸರ್ಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ವರ್ಗಾವಣೆಯನ್ನು ಪರಿಣಾಮಕಾರಿಯಾಗುವಂತೆ ಮಾಡುವ ಉದ್ದೇಶಕ್ಕಾಗಿ ತಾನು ಅವಶ್ಯಕವೆಂದು ಭಾವಿಸುವ ಅಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ನೀಡಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು .

**67. ಗೊತ್ತುವಳಿಯ ಪ್ರತಿಗಳನ್ನು ಸಲ್ಲಿಸುವುದು ಮತ್ತು ಗೊತ್ತುವಳಿ ಅಥವಾ ಆದೇಶವನ್ನು ರದ್ದುಪಡಿಸಲು ಸರ್ಕಾರದ ಅಧಿಕಾರ.–** (1) ಕಮಿಷನರು, ಪ್ರಾಧಿಕಾರದ ಎಲ್ಲ ಗೊತ್ತುವಳಿಗಳ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಯಾವುದೇ ಗೊತ್ತುವಳಿ ಅಥವಾ ಆದೇಶದ ಜಾರಿಯು ಅಥವಾ ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಮಾಡಲಾದ ಕೃತ್ಯ ಅಥವಾ ಮಾಡಬೇಕೆಂದಿರುವ ಯಾವುದೇ ಕೃತ್ಯವು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಪ್ರದತ್ತವಾದ ಅಧಿಕಾರಗಳ ಉಲ್ಲಂಘನೆಯಲ್ಲಿ ಅಥವಾ ಅಧಿಕಾರವನ್ನು ಮೀರಿ ಆದುದೆಂದು ಅಥವಾ ಶಾಂತಿ ಭಂಗ ಉಂಟು ಮಾಡುವ ಸಂಭವವಿದೆಯೆಂದು ಅಥವಾ ಸಾರ್ವಜನಿಕರಿಗೆ ಅಥವಾ ಯಾವುದೇ ವರ್ಗಕ್ಕೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಹಾನಿ ಅಥವಾ ಕಿರುಕುಳ ಉಂಟುಮಾಡುವುದೆಂದು ಅಥವಾ ಪ್ರಾಧಿಕಾರದ ಹಿತಾಸಕ್ತಿಗಳಿಗೆ ಬಾಧಕ ಉಂಟುಮಾಡುತ್ತದೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಲಿಖಿತ ಆದೇಶದ ಮೂಲಕ,–

(ಎ) ಗೊತ್ತುವಳಿ ಅಥವಾ ಆದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ರದ್ದುಗೊಳಿಸಬಾರದೇಕೆ; ಅಥವಾ

(ಬಿ) ಸಂಬಂಧಪಟ್ಟ ವಿನಿಯಮ ಅಥವಾ ಉಪ-ಕಾನೂನನ್ನು ಪೂರ್ಣವಾಗಿ ಅಥವಾ ಭಾಗಶಃ ನಿರಸನಗೊಳಿಸಬಾರದೇಕೆ,

– ಎಂಬ ಬಗ್ಗೆ ಹದಿನೈದು ದಿನಗಳಿಗಿಂತ ಕಡಿಮೆಯಲ್ಲದಷ್ಟು ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಕಾರಣ ತೋರಿಸುವಂತೆ ಕೋರಿ, ಪ್ರಾಧಿಕಾರಕ್ಕೆ ಒಂದು ನೋಟೀಸನ್ನು ನೀಡಿದ ತರುವಾಯ, ಅಂಥ ಗೊತ್ತುವಳಿ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಅಥವಾ ಅಂಥ ಯಾವುದೇ ಕೃತ್ಯ ಮಾಡುವುದನ್ನು ನಿಷೇಧಿಸಬಹುದು.

(3) ಪ್ರಾಧಿಕಾರದಿಂದ ಸ್ವೀಕರಿಸಲಾದ ಪ್ರತ್ಯುತ್ತರ, ಯಾವುದಾದರೂ ಇದ್ದರೆ, ಅದನ್ನು ಪರಿಶೀಲಿಸಿದ ಮೇಲೆ ಮತ್ತು ತಾನು ಉಚಿತವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಸರ್ಕಾರವು, ಗೊತ್ತುವಳಿ ಅಥವಾ ಆದೇಶವನ್ನು ರದ್ದುಗೊಳಿಸುವ ಅಥವಾ ವಿನಿಯಮ ಅಥವಾ ಉಪ-ಕಾನೂನನ್ನು ನಿರಸನಗೊಳಿಸುವ ಆದೇಶಗಳನ್ನು ಹೊರಡಿಸಿ ಅದನ್ನು ಪ್ರಾಧಿಕಾರಕ್ಕೆ ತಿಳಿಸಬಹುದು.

(4) ಸರ್ಕಾರವು, ಪ್ರಾಧಿಕಾರದಿಂದ ಮಾಡಿಕೊಳ್ಳಲಾದ ಹೆಚ್ಚಿನ ಮನವಿಯ ಮೇರೆಗೆ, ಅಥವಾ ಅನ್ಯಥಾ ಯಾವ ಕಾಲದಲ್ಲೇ ಆಗಲಿ, (3)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಒಂದು ಆದೇಶವನ್ನು ಪರಿಷ್ಕರಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

**68. ಕರ್ತವ್ಯ, ನಿರ್ವಹಣೆಯಲ್ಲಿ ತಪ್ಪುವುದು.–** (1) ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ತನಗೆ ವಿಧಿಸಲಾದ ಯಾವುದೇ ಕರ್ತವ್ಯವನ್ನು ನಿರ್ವಹಿಸುವಲ್ಲಿ ಪ್ರಾಧಿಕಾರವು ತಪ್ಪಿದೆಯೆಂದು ಸರ್ಕಾರಕ್ಕೆ ಮನದಟ್ಟಾದರೆ, ಆ ಕರ್ತವ್ಯದ ನಿರ್ವಹಣೆಗಾಗಿ ಅದು ಒಂದು ಅವಧಿಯನ್ನು ನಿಗದಿಪಡಿಸಬಹುದು.

(2) ಅಂಥ ಕರ್ತವ್ಯವನ್ನು ಹಾಗೆ ನಿಗದಿಪಡಿಸಲಾದ ಅವಧಿಯೊಳಗಾಗಿ ನಿರ್ವಹಿಸಲು ಪ್ರಾಧಿಕಾರವು ತಪ್ಪಿದೆಯೆಂದು ಅಥವಾ ನಿರ್ಲಕ್ಷಿಸಿದೆಯೆಂದು ಸರ್ಕಾರವು ಅಭಿಪ್ರಾಯಪಟ್ಟರೆ, 5ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರವನ್ನು ನಿಯಮಿಸಲಾದ ರೀತಿಯಲ್ಲಿ ರದ್ದುಗೊಳಿಸುವುದು ಮತ್ತು ಪುನರ್‌ರಚಿಸುವುದು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಪ್ರಾಧಿಕಾರವು ರದ್ದಾದ ತರುವಾಯ ಅಥವಾ ಅದು ಪುನಾರಚಿತವಾಗುವವರೆಗೆ ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಸರ್ಕಾರವು ಅಥವಾ ಈ ಉದ್ದೇಶಕ್ಕಾಗಿ ಸರ್ಕಾರದಿಂದ ನೇಮಿತರಾದ ಅಂಥ ಅಧಿಕಾರಿ ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು.

**69. ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ ತಿದ್ದುಪಡಿ.–** ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಲ್ಲಿ,–

(ಎ) 2ನೇ ಪ್ರಕರಣದಲ್ಲಿ , (7)ನೇ ಖಂಡದ (ಎ) ಉಪಖಂಡದ (i) ನೇ ಬಾಬಿನ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(ia) the local planning area comprising any "urban area" as defined in the Karnataka Urban Development Authorities Act, 1987, the Urban Development Authority of such urban area ;

(ಬಿ) 1[81ಸಿ ಪ್ರಕರಣದ ತರುವಾಯ]1 ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"1[81ಆ]1. **Consequences to ensure upon the constitution of the urban Development Authority.-** Notwithstanding anything contained in this Act, with effect from the date on which the Urban Development Authority is constituted under the Urban Development Authorities Act, 1987 the following consequences shall ensue,-

(i) the Urban Development Authority shall be the Planning Authority for the local planning area comprising the urban area over which the planning Authority for the city or town had jurisdiction immediately before the date on which the Urban Development Authority is constituted ;

(ii) the Urban Development Authority shall exercise the powers, perform the functions and discharge the duties under this Act in the urban area as if it were a Planning Authority constituted for the city or town ;

(iii) the Planning Authority in the urban area shall stand dissolved and upon such dissolution,-

(a) anything done or any action taken (including any appointment, notification, order, scheme or bye-law made or issued), any commencement certificate or permission granted by the Planning Authority shall be deemed to have been done, taken, made, issued or granted under the provisions of this Act by the Urban Development Authority and continue to be in force until it is superseded by anything done or any action taken, any appointment, notification, order, scheme, or bye-law made or issued, commencement certificate or permission granted by the Urban Development Authority under the provisions of this Act ;

(b) all obligations and liabilities incurred, all contracts entered into, all matters and things engaged to be done by, with, or for the Planning Authority shall be deemed to have been incurred, entered into, or engaged to be done by, with, or for the Urban Development Authority;

(c) all property movable and immovable and all interests of whatsoever nature and kind therein vested in the Planning Authority shall with all rights of whatsoever description used, enjoyed or possessed by the Planning Authority, vest in the Urban Development Authority ;

(d) all suits, prosecutions and other legal proceedings instituted or which might have been instituted by or against the Planning Authority may be continued or be instituted by or against the Urban Development Authority."

1. 1991ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 19.11.1997 ರಿಂದ ಪ್ರತಿಸ್ಥಾಪಿಸಲಾಗಿದೆ.

**70. ಈ ಅಧಿನಿಯಮದ ಪ್ರಾರಂಭದ ತರುವಾಯ ಗೃಹನಿರ್ಮಾಣ ಮಂಡಲಿಯು ಯಾವುದೇ ಗೃಹ ನಿರ್ಮಾಣ ಸ್ಕೀಮನ್ನು ಕೈಗೊಳ್ಳಬಾರದು.-** ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 10) ರ ಅಡಿಯಲ್ಲಿ ಸ್ಥಾಪಿತವಾದ ಗೃಹ ನಿರ್ಮಾಣ ಮಂಡಲಿಯು, ನಗರಾಭಿವೃದ್ಧಿ ಪ್ರಾಧಿಕಾರದ

ನೆಲವಿನ್ಯಾಸ ಯೋಜನೆಯನುಗುಣವಾಗಿದ್ದ ಹೊರತು, ನಗರ ಪ್ರದೇಶದೊಳಗಿರುವ ಯಾವುದೇ ಪ್ರದೇಶದಲ್ಲಿ ಯಾವುದೇ ಗೃಹ ನಿರ್ಮಾಣ ಸ್ಕೀಮನ್ನು ಕೈಗೊಳ್ಳತಕ್ಕದ್ದಲ್ಲ :

ಪರಂತು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ಕೈಗೊಳ್ಳಲಾದ ಯಾವುದೇ ಗೃಹ ನಿರ್ಮಾಣ ಸ್ಕೀಮನ್ನು ಸದರಿ ಸ್ಕೀಮಿಗನುಸಾರವಾಗಿ ಮಂಡಲಿಯಿಂದ ನಿರ್ವಹಿಸತಕ್ಕದ್ದು.

**71. ನಿಯಮಗಳ ರಚನಾಧಿಕಾರ.**- (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ಈ ಅಧಿನಿಯಮದ ನಿರ್ವಹಣೆಗೆ ಸಂಬಂಧಪಟ್ಟ ಅಥವಾ ಇದರಲ್ಲಿ ಸ್ಪಷ್ಟವಾಗಿ ಉಪಬಂಧಿಸಿಲ್ಲದ ಪ್ರಕರಣಗಳ ಸಂಬಂಧದಲ್ಲಿ ಪ್ರಾಧಿಕಾರ ಮತ್ತು ವ್ಯಕ್ತಿಗಳ ಮಾರ್ಗದರ್ಶನ ;

(ಬಿ) ಪ್ರಾಧಿಕಾರದ ಅಧ್ಯಕ್ಷರು ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು ;

(ಸಿ) ಸಮಿತಿಗಳನ್ನು ನೇಮಿಸುವ ವಿಧಾನ ಮತ್ತು ಅಂಥ ನೇಮಕದ ಕಾಲಾವಧಿ ;

(ಡಿ) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಪ್ರಾಧಿಕಾರವು, ಅಭಿವೃದ್ಧಿ ಸ್ಕೀಮು ಅಥವಾ ಕಾಮಗಾರಿಗಳನ್ನು ಕೈಗೊಳ್ಳಬಹುದು ಮತ್ತು ಅದನ್ನು ನಿರ್ವಹಿಸಬಹುದು ;

(ಇ) ಸ್ಕೀಮನ್ನು ಅನ್ವಯಿಸುವಲ್ಲಿ ನಿರ್ದಿಷ್ಟಪಡಿಸಬೇಕಾದ ವಿವರಗಳು ;

(ಎಫ್) ಯಾವ ನಿರ್ಬಂಧಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು ಪ್ರಾಧಿಕಾರವು ಚರ ಅಥವಾ ಸ್ಥಿರ ಸ್ವತ್ತನ್ನು ಗೇಣಿಗೆ ಕೊಡಬಹುದು, ಮಾರಾಟ ಮಾಡಬಹುದು ಅಥವಾ ವರ್ಗಾವಣೆ ಮಾಡಬಹುದು;

(ಜಿ) ನಿವೇಶನಗಳನ್ನು ಹರಾಜಿನ ಮೂಲಕ ಹಂಚುವುದನ್ನು ಅಥವಾ ಮಾರಾಟ ಮಾಡುವುದನ್ನು ಪ್ರಾಧಿಕಾರದಿಂದ ನಿಯಂತ್ರಿಸುವುದು ;

(ಎಚ್) ಪ್ರಾಧಿಕಾರದ ಪುನರ್‌ರಚನೆಯ ವಿಧಾನ ;

(ಐ) ನಿಯಮಗಳಿಂದ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**72. ವಿನಿಯಮಗಳ ರಚಾನಾಧಿಕಾರ.**- (1) ಪ್ರಾಧಿಕಾರವು,ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂಥ ವಿನಿಯಮಗಳನ್ನು ರಚಿಸಬಹುದು ಮತ್ತು ಈ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ವಿನಿಯಮಗಳು, ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ :-

(ಎ) ಪ್ರಾಧಿಕಾರದ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು ಮತ್ತು ಅಂಥ ಸಭೆಗಳನ್ನು ನಡೆಸಬೇಕಾದ ಕಾಲ ಮತ್ತು ಸ್ಥಳ, ಅಂಥ ಸಭೆಯಲ್ಲಿನ ಕಾರ್ಯಕಲಾಪಗಳು ಮತ್ತು ಅ ಸಭೆಯ ಗಣಪೂರ್ತಿಗೆ ಅವಶ್ಯವಿರುವ ಸದಸ್ಯರ ಸಂಖ್ಯೆ ;

(ಬಿ) ಸಮಿತಿಗಳಿಗೆ ಸೂಚನೆಗಳನ್ನು ನೀಡುವುದು ;

(ಸಿ) ಪ್ರಾಧಿಕಾರದ ಮೂಲಕ ಮಾಡಿಕೊಳ್ಳಬೇಕಾದ ಕರಾರು ಅಥವಾ ಒಪ್ಪಂದದ ವಿಧಾನ ;

(ಡಿ) ಬಾಕಿಗಳ ವಸೂಲಿಗಾಗಿ ಪ್ರೊಸೆಸ್ಸುಗಳನ್ನು ಜಾರಿಗೊಳಿಸಲು ವ್ಯಕ್ತಿಗಳ ನೇಮಕಾತಿ ;

(ಇ) ೫೫ ಮತ್ತು ೫೫೫ ನೇ ಅಧ್ಯಾಯಗಳ ಅಡಿಯಲ್ಲಿ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸಲು ಅನುಸರಿಸಬೇಕಾದ ಕಾರ್ಯವಿಧಾನ ;

(ಎಫ್) ಪ್ರಾಧಿಕಾರಕ್ಕೆ ಎರವಲು ನೀಡಲಾಗಿರುವ ಸರ್ಕಾರಿ ಅಧಿಕಾರಿಗಳಲ್ಲದ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ರಜೆ, ರಜಾಭತ್ಯೆಗಳು, ನಿವೃತ್ತಿ ವೇತನಗಳು, ಮತ್ತು ಉಪದಾನಗಳನ್ನು ಮಂಜೂರು ಮಾಡುವುದನ್ನು ವಿನಿಯಮಿಸುವುದು ಮತ್ತು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಇತರ ವಿಷಯಗಳು :

(ಜಿ) ಅಧಿನಿಯಮದ ಅಡಿಯಲ್ಲಿ ವಿನಿಯಮಗಳ ಮೂಲಕ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(2) ಸರ್ಕಾರವು, ಅಧಿಸೂಚನೆಯ ಮೂಲಕ, ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಯಾವುದೇ ವಿನಿಯಮವನ್ನು ರದ್ದುಪಡಿಸಬಹುದು ಮತ್ತು ಅನಂತರ, ಸದರಿ ವಿನಿಯಮವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಎಲ್ಲ ವಿನಿಯಮಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**73. ಉಪ-ಕಾನೂನುಗಳ ರಚನಾಧಿಕಾರ.-** (1) ಪ್ರಾಧಿಕಾರವು, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು ಅಥವಾ ವಿನಿಯಮಗಳಿಗೆ ಅಸಂಗತವಾಗದಂತೆ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟ ಉಪ-ಕಾನೂನುಗಳನ್ನು ರಚಿಸಬಹುದು, ಎಂದರೆ:-

(ಎ) ಯಾವುದೇ ಸ್ಕೀಮಿನ ಅಡಿಯಲ್ಲಿ ನಿರ್ಮಿಸಲಾದ ಮನೆಗಳ ನಿರ್ವಹಣೆ, ಬಳಕೆ ಮತ್ತು ನಿಯಂತ್ರಣ;

(ಬಿ) ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಕಟ್ಟಡಗಳ ನಿರ್ಮಾಣ ಮತ್ತು ಪುನರ್ನಿರ್ಮಾಣವನ್ನು ನಿಯಂತ್ರಿಸುವುವುದು, ಎಂದರೆ ನಿರ್ಮಾಣಕ್ಕೆ ಮುಂಚೆಯೆ ನೀಡಬೇಕಾದ ನೋಟೀಸು, ಸಲ್ಲಿಸಬೇಕಾದ ನಕ್ಷೆ, ನೆರೆಹೊರೆಯ ಕಟ್ಟಡಗಳ ಮುಂಭಾಗಕ್ಕೂ ರಸ್ತೆಗೂ ಮಧ್ಯ ಇರುವ ಸ್ಥಳ, ಅಲ್ಲಿನ ಕಟ್ಟಡಗಳಿಗೆ ಬಿಡಬೇಕಾದ ಖಾಲಿ ಜಾಗ, ತಳಪಾಯದ ಮಟ್ಟ ಮತ್ತು ಅಗಲ, ಕಟ್ಟಡದ ಭದ್ರತೆ, ಉಪಯೋಗಿಸಬೇಕಾದ ಸಾಮಾಗ್ರಿಗಳು ಮತ್ತು ಚರಂಡಿ ಹಾಗೂ ಗಾಳಿ-ಬೆಳಕಿಗಾಗಿ ಮಾಡಲಾದ ವ್ಯವಸ್ಥೆಗಳು ;

(ಸಿ) ಬಡಾವಣೆಗಳು ಅಥವಾ ಲೇಔಟುಗಳ ನಿರ್ಮಾಣ ಮತ್ತು ಬೀದಿಗಳ ರೂಪಷೇ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮಾಹಿತಿ ಮತ್ತು ನಕ್ಷೆಗಳ ನಿರ್ಧರಣ, ಬಡಾವಣೆಗಳು ಅಥವಾ ಲೇಔಟ್‌ಗಳನ್ನು ನಿರ್ಮಿಸುವ ಮತ್ತು ಖಾಸಗಿ ರಸ್ತೆಗಳನ್ನು ರಚಿಸುವ ಸಲುವಾಗಿ ಅನುಮತಿ ಮತ್ತು ರಸ್ತೆಗಳ ಉದ್ದ ಮತ್ತು ಅಗಲ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರದ ನಿಯಂತ್ರಣ.

(2) ಸರ್ಕಾರವು, ಅಧಿಸೂಚನೆಯ ಮೂಲಕ, ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಯಾವುದೇ ಉಪ-ಕಾನೂನನ್ನು ರದ್ದುಗೊಳಿಸಬಹುದು ಮತ್ತು ತದನಂತರ, ಸದರಿ ಉಪ-ಕಾನೂನು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಎಲ್ಲ ಉಪ-ಕಾನೂನುಗಳನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಮತ್ತು ನಗರ ಪ್ರದೇಶದಲ್ಲಿ ವ್ಯಾಪಕ ಪ್ರಸಾರ ಹೊಂದಿರುವ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಕಡೇಪಕ್ಷ ಎರಡು ವೃತ್ತಪತ್ರಿಕೆಗಳಲ್ಲಿ ಸಹ ಪ್ರಕಟಿಸತಕ್ಕದ್ದು.

**74. ಭೂಮಿಯ ಅನಧಿಕೃತ ಅಧಿಭೋಗದ ನಿಷೇಧ.-** (1) ಪ್ರಾಧಿಕಾರಕ್ಕೆ ಸೇರಿರುವ ಯಾವುದೇ ಭೂಮಿಯನ್ನು ಉಪಯೋಗಿಸಲು ಅಥವಾ ಅಧಿಭೋಗಿಸಲು ಹಕ್ಕು ಇಲ್ಲದ ಅಥವಾ ಹಕ್ಕು ರದ್ದಾಗಿರುವಂಥ ಯಾವುದೇ ಭೂಮಿಯ ಮೇಲೆ ಅನಧಿಕೃತವಾಗಿ ಪ್ರವೇಶಿಸುವ ಮತ್ತು ಉಪಯೋಗಿಸುವ ಅಥವಾ ಅಧಿಬೋಗಿಸುವ ಯಾವೊಬ್ಬ ವ್ಯಕ್ತಿಯನ್ನು, ದೋಷಸಿದ್ದಿಯ ತರುವಾಯ, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದುಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭಕ್ಕಾಗಲಿ ಅಥವಾ ತರುವಾಯವಾಗಲಿ, ಪ್ರಾಧಿಕಾರಕ್ಕೆ ಸೇರಿರುವ ಯಾವುದೇ ಭೂಮಿಯನ್ನು ಉಪಯೋಗಿಸಲು ಅಥವಾ ಅಧಿಭೋಗಿಸಲು ಹಕ್ಕು ಇಲ್ಲದ ಅಥವಾ ಹಕ್ಕು ರದ್ದಾಗಿರುವಂಥ ಯಾವುದೇ ಭೂಮಿಯ ಮೇಲೆ, ಅನಧಿಕೃತ ಅಧಿಭೋಗವನ್ನು ಹೊಂದಿರುವ ಯೊವೊಬ್ಬ ವ್ಯಕ್ತಿಯು, ಕರ್ನಾಟಕ ಸರ್ಕಾರಿ ಆವರಣ (ಅನಧಿಕೃತ ಆಧಿಭೂಗದಾರರನ್ನು ಒಕ್ಕಲೆಬ್ಬಿಸುವುದು)ಗಳ ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 32)ರ 5ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿನ ಆದೇಶಕ್ಕನುಗುಣವಾಗಿ ಅಂಥ ಭೂಮಿಯನ್ನು ಬಿಟ್ಟುಕೊಡಲು ತಪ್ಪಿದಲ್ಲಿ, ಅವನನ್ನು, ದೋಷಸಿದ್ದಿಯ ತರುವಾಯ, ಮೂರು ವರ್ಷಗಳ ಅವಧಿಯವರೆಗಿನ ಕಾರಾವಾಸದಿಂದ ಮತ್ತು ಐದುಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಅಂಥ ಅಪರಾಧಕ್ಕಾಗಿ ಮೊದಲ ದೋಷಸಿದ್ದಿಯ ದಿನಾಂಕದ ತರುವಾಯವು ಮುಂದುವರೆದ ಅಧಿಭೋಗದ ಪ್ರತಿಯೊಂದು ದಿನಕ್ಕೂ, ಆ ಭೂಮಿಯ ಎಕರೆಯೊಂದಕ್ಕೆ ಅಥವಾ ಅದರ ಭಾಗಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿಸತಕ್ಕದ್ದು.

(3) ಯಾವೊಬ್ಬ ವ್ಯಕ್ತಿಗೆ, (1)ನೇ ಉಪಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಮಾಡಿಸಲು ಉದ್ದೇಶಪೂರ್ವಕವಾಗಿ ನೆರವೀಯುವ ಅಥವಾ ದುಷ್ಪ್ರೇರಣೆ ನೀಡುವ ಯಾವೊಬ್ಬನು, ದೋಷಸಿದ್ಧಿಯ ತರುವಾಯ, ಸದರಿ ಉಪಪ್ರಕರಣಗಳ ಅಡಿಯಲ್ಲಿ ಅಂಥ ಅಪರಾಧಕ್ಕಾಗಿ ವಿಧಿಸಲಾದ ಅಂಥದೇ ಶಿಕ್ಷೆಗೆ ಗುರಿಯಾಗತಕ್ಕದ್ದು.

**75. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ.**- ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ಅಥವಾ ಮಂಜೂರಾದ ಯಾವುದೇ ನಿಯಮ, ವಿನಿಯಮ ಅಥವಾ ಉಪ-ಕಾನೂನು ಅಥವಾ ಸ್ಕೀಮನ್ನು ಉಲ್ಲಂಘಿಸುವ ಯಾರೇ ಆಗಲಿ, ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು ಮತ್ತು ಉಲ್ಲಂಘನೆಯು ಮುಂದುವರೆಯುತ್ತಿರುವ ಸಂದರ್ಭದಲ್ಲಿ ಉಲ್ಲಂಘನೆಯು ಮುಂದುವರೆಯುವ ಮೊದಲ ಬಾರಿಯ ತರವಾಯದ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**76. ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರಬೇಕು.**- (1) ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವಂಥ ಯಾವುವೇ ವಿಷಯಗಳನ್ನು ಒಳಗೊಂಡಿದ್ದರೂ, ಪರಿಣಾಮವುಳ್ಳದ್ದಾಗಿರತಕ್ಕದ್ದು.

(2) ಯಾವುದೇ ನಗರ ಪ್ರದೇಶಕ್ಕಾಗಿ ಒಂದು ಪ್ರಾಧಿಕಾರವು ರಚಿತವಾಗಿದ್ದು, ಅದು ಅಲ್ಲಿ ಕಾರ್ಯ ನಿರ್ವಹಿಸುತ್ತಿರುವಲ್ಲಿ, ಅಂಥ ನಗರ ಪ್ರದೇಶಕ್ಕೆ, ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ ಗಿಖಖ ನೇ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳು ಅನ್ವಯಿಸತಕ್ಕದ್ದಲ್ಲ.

**77. ಪ್ರಾಧಿಕಾರದ ವಿಘಟನೆ.**- (1) ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಪ್ರಾಧಿಕಾರವು ವಿಘಟನೆಯಾಗತಕ್ಕದ್ದೆಂದು, ಘೋಷಿಸಬಹುದು:

ಪರಂತು, ಆ ಸಂಬಂಧದ ಗೊತ್ತುವಳಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿದ್ದು, ಅದು ಅಂಗೀಕೃತವಾದ ಹೊರತು, ಸರ್ಕಾರವು ಅಂಥ ಯಾವುದೇ ಘೋಷಣೆಯನ್ನು ಮಾಡತಕ್ಕದ್ದಲ್ಲ.

(2) 1ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿಷ್ಟಪಡಿಸಲಾದ ’ ದಿನಾಂಕದಿಂದ ಜಾರಿಯಲ್ಲಿ ಬರುವಂತೆ,-

(ಎ) ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲೀಯವಾಗಬಹುದಾದ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರಿಂದ ವಸೂಲೀಯವಾಗತಕ್ಕದ್ದು;

(ಬಿ) ಪ್ರಾಧಿಕಾರದ ವಿರುದ್ಧ ಜಾರಿಗೊಳಿಸಬಹುದಾದ ಎಲ್ಲ ದಾಯಿತ್ವಗಳು ಸರ್ಕಾರದಲ್ಲಿ ನಿಹಿತವಾಗಿದ್ದು, ಆದರಿಂದ ವಸೂಲಾದ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳಮಟ್ಟಿಗೆ ಸರ್ಕಾರದ ವಿರುದ್ಧ ಜಾರಿಗೊಳಿಸಬಹುದಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿರುವುದಾವುದೂ, 40ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಖಾತರಿ ನೀಡಲಾದ ಸಾಲಗಳು ಅಥವಾ ಡಿಬೆಂಚರುಗಳಿಗೆ ಸಂಬಂಧಿಸಿದಂತೆ ಸರ್ಕಾರದ ದಾಯಿತ್ವವನ್ನು ಬಾಧಿಸತಕ್ಕದ್ದಲ್ಲ.

**78. ನಗರಾಭಿವೃದ್ಧಿ ಪ್ರಾಧಿಕಾರದ ರಚನೆಯಿಂದಾಗುವ ಪರಿಣಾಮಗಳು.**- (1) 3ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಿ ಯಾವುದೇ ನಗರ ಪ್ರದೇಶಕ್ಕಾಗಿ ಒಂದು ನಗರಾಭಿವೃದ್ಧಿ ಪ್ರಾಧಿಕಾರದ ರಚನೆಯಾದ ಮೇಲೆ, ಸಂದರ್ಭಾನುಸಾರ, ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 11) ಅಥವಾ ಮೈಸೂರು ನಗರ ಸುಧಾರಣಾ ಅಧಿನಿಯಮ, 1903 (1903ರ ಮೈಸೂರು ಅಧಿನಿಯಮ ಖಖಖ) ಅಂಥ ನಗರ ಪ್ರದೇಶದಲ್ಲಿ ಅನ್ವಯವಾಗುವುದು ನಿಂತು ಹೋಗತಕ್ಕದ್ದು.

(2) ಅಂಥ ಸಮಾಪ್ತಿಯಾದ ಮೇಲೆ, ಸದರಿ ಅಧಿನಿಯಮಗಳ ಅಡಿಯಲ್ಲಿ ಅಂಥ ನಗರ ಪ್ರದೇಶಗಳಿಗಾಗಿ ರಚಿತವಾದ ಸುಧಾರಣಾ ಮಂಡಲಿ *[ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ] ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು- ಇವುಗಳು ವಿಘಟಿತವಾಗತಕ್ಕದ್ದು.

* 1996ರ ಅಧಿನಿಯಮ ಸಂಖ್ಯೆ: 12ರಲ್ಲಿ ಜಾರಿಗೆ ಬಂದ ದಿನಾಂಕದಿಂದ ಇದನ್ನು ತೆಗೆದು ಹಾಕಲಾಗುವುದು.

(3) (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ ಪ್ರಕರಣದಲ್ಲಿರುವುದಾವುದೂ,-

(ಎ) ಸದರಿ ಅಧಿನಿಯಮಿತಿಗಳ ಹಿಂದಿನ ಕಾರ್ಯಚರಣೆ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಆ ಮೇರೆಗೆ ಎಡೆಗೊಡಲಾದ ಯಾವುದನ್ನೂ; ಅಥವಾ

(ಬಿ) ಸದರಿ ಅಧಿನಿಯಮಿತಿಯಲ್ಲಿ ಆರ್ಜಿಸಲಾದ, ಕೂಡಿಬಂದ ಅಥವಾ ಪ್ರಾಪ್ತವಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಅನ್ವಯ ಅಥವಾ ದಾಯಿತ್ವವನ್ನು; ಅಥವಾ

(ಸಿ) ಸದರಿ ಅಧಿನಿಯಮಿತಿಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ ಪ್ರಾಪ್ತವಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ಜುಲ್ಮಾನೆಯನ್ನು ;

(ಡಿ) ಮೇಲೆ ಹೇಳಲಾದಂಥ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ, ದಾಯಿತ್ವ, ಮುಟ್ಟುಗೋಲು ಅಥವಾ ಜುಲ್ಮಾನೆಗೆ ಸಂಬಂಧಪಟ್ಟ ಯಾವುದೇ ತನಿಖೆ, ಕಾನೂನು ವ್ಯವಹರಣೆಗಳು ಅಥವಾ ಪರಿಹಾರವನ್ನು,

- ಬಾಧಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆಗಳು ಅಥವಾ ಪರಿಹಾರವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡ , ಮುಟ್ಟುಗೋಲು ಅಥವಾ ಜುಲ್ಮಾನೆಯನ್ನು, ಈ ಅಧಿನಿಯಮವನ್ನು ಜಾರಿಗೊಳಿಸಿಲ್ಲದಿದ್ದರೆ ಹೇಗೋ ಹಾಗೆ ವಿಧಿಸಬಹುದು.

(4) (ಎ) ಪೂರ್ವೋಕ್ತ ಉಪಬಂಧಗಳಿಗೊಳಪಟ್ಟು, ಸದರಿ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ (ಮಾಡಲಾದ ಯಾವುದೇ ನೇಮಕಾತಿ ಅಥವಾ ಪ್ರತ್ಯಾಯೋಜನೆ, ವಿಧಿಸಲಾದ ತೆರಿಗೆ ಅಥವಾ ಶುಲ್ಕ, ಹೊರಡಿಸಲಾದ ಅಧಿಸೂಚನೆ, ಆದೇಶ, ಲಿಖಿತ ಪತ್ರ ಅಥವಾ ನಿರ್ದೇಶನ ರಚಿಸಲಾದ ನಿಯಮ, ವಿನಿಯಮ, ಉಪ-ಕಾನೂನು ಅಥವಾ ಸ್ಕೀಮು, ಪಡೆಯಲಾದ ಪ್ರಮಾಣ ಪತ್ರ, ಮಂಜೂರಾದ ಅನುಮತಿ ಅಥವಾ ಲೈಸನ್ಸ್ ಅಥವಾ ಜಾರಿಗೊಳಿಸಲಾದ ನೊಂದಣಿಯೂ ಸೇರಿದಂತೆ)ವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳಲ್ಲಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವು ರದ್ದಾಗುವವರೆಗೆ ಮತ್ತು ರದ್ದಾದ ಹೊರತು ತದನುಸಾರವಾಗಿ ಜಾರಿಗೊಳಿಸಿದರೆ ಹೇಗೋ ಹಾಗೆ ಮುಂದುವರೆಯತಕ್ಕದ್ದು ;

(ಬಿ) ಸರ್ಕಾರವು ಆದೇಶಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ವರ್ಗದ ನೌಕರರಲ್ಲದೆ, ಸುಧಾರಣಾ ಮಂಡಲಿ *[ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ] ಮತ್ತು ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು-ಇವುಗಳ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ನಗರಾಭಿವೃದ್ಧಿ ಸಂವಾದಿ ಪ್ರಾಧಿಕಾರದ ನೌಕರರಾಗತಕ್ಕದ್ದು ಮತ್ತು ಇತರ ಉಪಬಂಧಗಳನ್ನು ರಚಿಸುವವರೆಗೆ ಸಂಬಂಧಪಟ್ಟ ನಗರ ಪ್ರದೇಶಕ್ಕಾಗಿ ಪ್ರಾಧಿಕಾರದ ರಚನೆಗೆ ನಿಕಟಪೂರ್ವದಲ್ಲಿ ಅವರು ಹಕ್ಕುಳ್ಳವರಾಗಿದ್ದ ವೇತನ ಮತ್ತು ಭತ್ಯಗಳನ್ನು ಸ್ವೀಕರಿಸತಕ್ಕದ್ದು ಮತ್ತು ಸೇವಾ ಷರತ್ತುಗಳಿಗೊಳಪಡತಕ್ಕದ್ದು;

(ಸಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಆ ದಿನಾಂಕದಂದು ಅಸ್ತಿತ್ವದಲ್ಲಿದ್ದ,-

(i) ಸುಧಾರಣಾ ಮಂಡಲಿ ;

(ii) *[ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ]

(iii) ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು;

- ಇವುಗಳ ಎಲ್ಲ ಆಸ್ತಿಗಳು ಮತ್ತು ದಾಯಿತ್ವಗಳು ಮತ್ತು ಇವುಗಳಿಂದ ಅಥವಾ ಇವುಗಳ ಪರವಾಗಿ ಮಾಡಿಕೊಳ್ಳಲಾದ ಎಲ್ಲಾ ಕರಾರುಗಳು, ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆಯಾಗತಕ್ಕದ್ದು ;

(ಡಿ) ಸುಧಾರಣಾ ಮಂಡಲಿ *[ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ] ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು-ಇವುಗಳ ನೌಕರರ ಸೌಲಭ್ಯಕ್ಕಾಗಿ ಭವಿಷ್ಯನಿಧಿ ಅಥವಾ ಸೇವಾ ನಿವೃತ್ತಿ ನಿಧಿ, ಅಥವಾ ಇತರ ಯಾವುದೇ ಅಂಥಹದೇ ನಿಧಿಯನ್ನು ಸ್ಥಾಪಿಸಿರುವಲ್ಲಿ , ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಂಥ ಯಾವುದೇ ನಿಧಿಯಲ್ಲಿ ಜಮೆಯಾಗಿದ್ದ ಹಣವು, ಅಂಥ ನಿಧಿಗೆ ಸೇರಿದ ಇತರ ಯಾವುವೇ ಆಸ್ತಿಗಳ

ಜೊತೆಯಲ್ಲಿ ಸರ್ಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು ಹಾಗೂ ಸರ್ಕಾರವು ಅಂಥ ನಿಧಿಗೆ ಸಂಬಂಧಪಟ್ಟಂತೆ ಸುಧಾರಣಾ ಮಂಡಲಿ,

*[ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ] ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು- ಇವುಗಳ ಹೊಣೆಗಳನ್ನು ನಿರ್ವಹಿಸಲು ಬದ್ಧವಾಗಿರತಕ್ಕದ್ದು;

* 1996ರ ಅಧಿನಿಯಮ ಸಂಖ್ಯೆ: 12ರಲ್ಲಿ ಜಾರಿಗೆ ಬಂದ ದಿನಾಂಕದಿಂದ ಇದನ್ನು ತೆಗೆದು ಹಾಕಲಾಗುವುದು.

(ಇ) ಯಾವುದೇ ಅಧಿನಿಯಮಿತಿಯಲ್ಲಿ ಮಾಡಲಾದ ಯಾವುದೇ ಉಲ್ಲೇಖ ಅಥವಾ ಯಾವುದೇ ನಿರಸಿತ ಅಧಿನಿಯಮಿತಿಯ ಯಾವುವೇ ಉಪಬಂಧಗಳಿಗೆ ಆದ ಲಿಖಿತಪತ್ರವನ್ನು ಒಂದು ಭಿನ್ನ ಉದ್ದೇಶವು ಕಂಡುಬಂದ ಹೊರತು, ಈ ಅಧಿನಿಯಮದ ಸಂವಾದಿ ಉಪಬಂಧಗಳಿಗೆ ಆದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**79. ಈ ಅಧಿನಿಯಮವನ್ನು ಜಾರಿಗೆ ತರುವ ಆದೇಶಗಳು.-** (1) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳ ಪ್ರವರ್ತನೆಗೆ ಸಂಬಂಧಿಸಿದಂತೆ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವ ಸಲುವಾಗಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡು ಬರಬಹುದಾದ ಅಂಥ ಉಪಬಂಧಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶದ ಮೂಲಕ ರಚಿಸಲಾದ ಉಪಬಂಧಗಳು, (3)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಅಧಿನಿಯಮಿತಗೊಳಿಸಲಾಗಿದೆಯೋ ಎಂಬಂತೆ ಜಾರಿಯಲ್ಲಿ ಬರತಕ್ಕದ್ದು ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದಲ್ಲದ ಯಾವುದೇ ದಿನಾಂಕಕ್ಕೆ ಪೂರ್ವಾನ್ವಯವಾಗುವಂತೆ ಅಂಥ ಯಾವುದೇ ಆದೇಶವನ್ನು ಮಾಡಬಹುದು:

ಪರಂತು, ಆದೇಶಗಳ ಯಾವುದೇ ಅಂಥ ಉಪಬಂಧವನ್ನು ರಚಿಸುವ ಮುಂಚಿನ ಯಾವುದೇ ದಿನಾಂಕಕ್ಕೆ ಅವನ್ನು, ಪೂರ್ವಾನ್ವಯ ಮಾಡುಷ್ಟು ಕಾರಣದಿಂದಲೇ ಯಾವೊಬ್ಬ ವ್ಯಕ್ತಿಯನ್ನು ಒಂದು ಅಪರಾಧದ ದೋಷಿಯೆಂದು ಭಾವಿಸತಕ್ಕದ್ದಲ್ಲ.

(3) 71ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮ ಮತ್ತು ಈ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಲಾದ ತರುವಾಯ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು, ನಿಯಮ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮ ಅಥವಾ ಆದೇಶವನ್ನು ಮಾಡಬಾರದೆಂದು ತೀರ್ಮಾನಿಸಿದರೆ, ತದನಂತರ, ಆ ನಿಯಮ ಅಥವಾ ಆದೇಶವು, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಅಥವಾ ಯಾವುದೇ ಪರಿಣಾಮವಿಲ್ಲದೆ ಜಾರಿಗೆ ಬರತಕ್ಕದ್ದು. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮ ಅಥವಾ ಆದೇಶದ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲ ಉಂಟುಮಾಡತಕ್ಕದ್ದಲ್ಲ.

* * * *

## ಅಧಿಸೂಚನೆ

## I

**ಬೆಂಗಳೂರು, ದಿನಾಂಕ 27ನೇ ಜುಲೈ 1993 [ಸಂಖ್ಯೆ: ವ ನ ಇ 164 ಟಿಟಿಪಿ 93]**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಪ್ರಕರಣ1ರ ಉಪಪ್ರಕರಣ 3 (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹೊಸಪೇಟೆ ನಗರ ಪ್ರದೇಶದಲ್ಲಿ ಸದರಿ ಕಾಯಿದೆಯು ದಿನಾಂಕ 27ನೇ ಜುಲೈ 1993ರಿಂದ ಜಾರಿಗೆ ಬರುವುದೆಂದು ಕರ್ನಾಟಕ ಸರ್ಕಾರವು ನಿಗದಿಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಎಸ್. ಜಿ. ಪ್ರಭು)
ಸರ್ಕಾರದ ಅಧೀನ ಕಾರ್ಯದರ್ಶಿ,
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.

## II

**ಬೆಂಗಳೂರು, ದಿನಾಂಕ 22ನೇ ಡಿಸೆಂಬರ್ 1987 [ಸಂಖ್ಯೆ: ವ ನ ಇ 839 ಟಿಟಿಪಿ 87]**

1987 ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34)ರ 1ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ನಿಹಿತವಾದ ಅಧಿಕಾರಗಳನ್ನು ಪ್ರಯೋಗಿಸಿ ಕರ್ನಾಟಕ ಸರ್ಕಾರವು ಮೇಲ್ಕಂಡ ಅಧಿನಿಯಮವು ದಿನಾಂಕ 1ನೇ ಜನವರಿ 1988ರಿಂದ ಈ ಕೆಳಕಂಡ ರಾಜ್ಯದ ನಗರ ಪ್ರದೇಶಗಳಲ್ಲಿ ಜಾರಿಗೆ ಬರುವಂತೆ ನಿಗದಿಪಡಿಸಿದೆ.

(1) ಕಾರವಾರ

(2) ಮಂಗಳೂರು

(3) ಮೈಸೂರು

(4) ಹುಬ್ಬಳ್ಳಿ-ಧಾರವಾಡ

(5) ಗುಲ್ಬರ್ಗಾ

(6) ಬೆಳಗಾಂ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಎ. ಆರ್. ಪಟಗಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.

## III

**Note.-** 1. ಮೇಲಿನ ಅಧಿಸೂಚನೆಗಳಲ್ಲದೆ ಇತರ ಅಧಿಸೂಚನೆಗಳನ್ನು ಪುಟ 459-460ರಲ್ಲಿ ನೋಡುವುದು.

2. ಚಾಮರಾಜನಗರ, ಗದಗ, ಹಾವೇರಿ, ಉಡಪಿ, ಕೊಪ್ಪಳ ಮತ್ತು ಬಾಗಲಕೋಟೆ ನಗರ ಪ್ರದೇಶ ಅಧಿಸೂಚನೆಗಳು ಲಭ್ಯವಿಲ್ಲ.

* * * *

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 51**

(2017ರ ಡಿಸೆಂಬರ್ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಅಧಿನಿಯಮ, 2017**

(2017ರ ಡಿಸೆಂಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(3) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

ಪ್ರಕರಣ 36ರ ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

** ** **